ವಾರದ ಮುಂಗಾರು

ಭಾನುವಾರ
26—5—1985

ವಾರದ ಚಿತ್ರ

ಅಬ್ಬಾ! ಎಲ್ಲಾ ಕುಡಿತಿಯಾ ? ಅವರಿಗೂ ಸ್ವಲ್ಪ ಉಳಿಸು

ಚಿತ್ರ: ಸಿ. ಎಚ್. ರಾಜಶೇಖರ್, ಚಿಕ್ಕಮಗಳೂರು

ಮೂಕನೂ ವಾಚಾಳಿ ಆಗುವಲ್ಲಿ

ದಿನೇಶ್ ಅಮಿನ್ ಮಟ್ಟು

ಚಿತ್ರ: ಕೇಶವ ವಿಟ್ಲ

'ಮಾತನಾಡದಿದ್ದ ಮಕ್ಕಳು ಮಾತನಾಡುತ್ತಿದ್ದಾರೆ. ಹಾಡುತ್ತಿದ್ದಾರೆ. ನಡೆಯಲಾಗದಿದ್ದ ಮಕ್ಕಳು ಓಡುತ್ತಾ, ಕುಣಿಯುತ್ತಾರೆ. ನಿಷ್ಕ್ರಿಯ ಮೆದುಳಿನಿಂದ ನಿಸ್ತೇಜನಗೊಂಡಿದ್ದ ಕಣ್ಣುಗಳು ಹೊಸ ಕನಸುಗಳನ್ನು ತುಂಬಿಕೊಂಡು ಮಿನುಗುತ್ತಿವೆ' ಇದೇನೂ ಪವಾಡವಲ್ಲ. ಮಂಗಳೂರಿನ ಸ್ಟೆಂಟ್ ಆಗ್ನೆಸ್ ಸ್ಪೆಶಲ್ ಸ್ಕೂಲ್ ತನ್ನ ಅವಿರತ ಪರಿಶ್ರಮದಿಂದ ನನಸಾಗಿಸಿದ ಕನಸಿದು.

'ಇಲ್ಲಿ ಪವಾಡ ನಡೆಯುತ್ತಿದೆ! ಮಾತನಾಡಲಾಗದಿದ್ದ ಮಕ್ಕಳು ಮಾತಾಡುತ್ತಿದ್ದಾರೆ; ಹಾಡುತ್ತಿದ್ದಾರೆ. ನಡೆಯಲಾಗದಿದ್ದ ಮಕ್ಕಳು ಓಡುತ್ತಿದ್ದಾರೆ; ಕುಣಿಯುತ್ತಿದ್ದಾರೆ. ನಿಷ್ಕ್ರಿಯ ಮೆದುಳಿನಿಂದ ನಿಸ್ತೇಜಗೊಂಡ ಕಣ್ಣುಗಳು ಹೊಸಕನಸುಗಳನ್ನು ತುಂಬಿಕೊಂಡು ಮಿನುಗುತಿವೆ. ಜೀವನ ವಿಡೀ ಹೆತ್ತವರ ಪಾಲಿನ ಹೊರೆಯಾಗಿ ಬದುಕು ನಡೆಸಬೇಕಾಗಿದ್ದ ಮಕ್ಕಳು ಸ್ವಾವಲಂಬಿ ಜೀವನದತ್ತ ನಿಧಾನವಾಗಿಯಾದರೂ ದೃಢವಾದ ಹೆಜ್ಜೆ ಹಾಕುತ್ತಿದ್ದಾರೆ.

ಈ ಪವಾಡ ಸದೃಶ ಬದಲಾವಣೆಯ ಹಿಂದೆ ಮಾಂತ್ರಿಕ ದಂಡದ ಶಕ್ತಿಯಿಲ್ಲ. ಮಮತೆ– ವಾತ್ಸಲ್ಯಗಳ ಮಾಂತ್ರಿಕ ಸ್ಪರ್ಶವಿದೆ. ಸಹನೆ– ಶ್ರದ್ಧೆಗಳಿಂದ ಕೂಡಿದ ಪರಿಶ್ರಮದ ಕತೆಯಿದೆ.

ಮಂಗಳೂರಿನ ಸ್ಟೆಂಟ್ ಆಗ್ನೆಸ್ ಕಾಲೇಜಿನ ಮುಂಭಾಗದಲ್ಲಿನ, ಸುತ್ತುಪರಿದ ಕಂಪೌಂಡಿನ ಒಳಗಿರುವ ಒಂ[illegible] ಶಾಲೆಯೇ ಪವಾಡಕೇಂದ್ರ. ಇದು ಬುದ್ಧಿಮಾಂದ್ಯ ಮಕ್ಕಳ ಶಿಕ್ಷಣಕ್ಕಾಗಿಯೇ ಸ್ಥಾಪನೆಗೊಂಡ ವಿಶೇಷ ಶಾಲೆ. ಆದಕ್ಕೆಂದೇ ಇದರ ಹೆಸರು– 'ಸ್ಟೆಂಟ್ ಆಗ್ನೆಸ್ ಸ್ಪೆಷಲ್ ಸ್ಕೂಲ್'.

ಸಮಾಜದ ಕಣ್ಣಿನಲ್ಲಿ ಅಸ್ಪೃಶ್ಯರೆನಿಸಿದವರು. ಪೆದ್ದರೆಂದೊ, ಹುಚ್ಚರೆಂದೊ, ತುಚ್ಛೀಕರಿಸಲ್ಪಟ್ಟವರು, ಅನುಕಂಪದ ಭಾದೆಯಿಂದ ಮತ್ತಷ್ಟು ಮುರುಟಿಹೋದ ಬುದ್ಧಿಮಾಂದ್ಯ ಮಕ್ಕಳು ಇಲ್ಲಿ ನಾಗರೀಕ ಸಮಾಜಕ್ಕೆ ಸವಾಲಾಗಿ ಬೆಳೆಯುತ್ತಿದ್ದಾರೆ. ಕಮರಿ ಹೋಗಲಿದ್ದ ಅನೇಕ ಎಳೆಯ ಪ್ರತಿಭೆಗಳು ಇಲ್ಲಿ ಅರಳುತ್ತಿವೆ.

ಕ್ರಿಶ್ಚಿಯನ್ ಮಿಷಿನರಿಗಳ ಕೊಡುಗೆ

ಭಾರತದ ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದ ಅಭಿವೃದ್ಧಿಯಲ್ಲಿ ಕ್ರೈಸ್ತಮಿಷಿನರಿಗಳ ಪಾತ್ರ ಅವಿಸ್ಮರಣೀಯ. ಈ ಸಾಲಿಗೆ ಸೇರಿದ 'ಅಬ್‌ಸ್ಟಾಲಿಕ್ ಕಾರ್ಮೆಲ್' ಎಂಬುದು ಅಂತರರಾಷ್ಟ್ರೀಯ ವ್ಯಾಪ್ತಿಯ ಸಂಸ್ಥೆ. ಶ್ರೀಲಂಕಾ, ಪಾಕಿಸ್ತಾನ ಮತ್ತು ಕುವೈಟ್‌ಗಳಲ್ಲಿ ಅನೇಕ ಶೈಕ್ಷಣಿಕ ಮತ್ತು ಸಾಮಾಜಿಕ ಸೇವಾ ಸಂಸ್ಥೆಗಳನ್ನು ನಡೆಸುತ್ತಿರುವ ಈ ಸಂಸ್ಥೆ ಭಾರತದಲ್ಲಿಯೂ ಹಲವಾರು ಕಡೆ ಶೈಕ್ಷಣಿಕ ಸಂಸ್ಥೆಗಳನ್ನು ಹೊಂದಿದೆ. ಮಂಗಳೂರಿನ ಸ್ಟೆಂಟ್ ಆಗ್ನೆಸ್ ಬಳಗದ ಶಾಲೆ ಕಾಲೇಜುಗಳು ಈ ಸಾಲಿಗೆ ಸೇರಿವೆ.

1970ರಲ್ಲಿ ಅಬ್‌ಸ್ಟಾಲಿಕ್ ಕಾರ್ಮೆಲ್ ಸಂಸ್ಥೆ ತನ್ನ ಶತಮಾನೋತ್ಸವ ಆಚರಿಸಿತು. ಆ ಸಂದರ್ಭದ ಸವಿನೆನಪಿನ ಶಾಶ್ವತ ಉಳಿವಿಗಾಗಿ ಸ್ಮಾರಕ ರೂಪದಲ್ಲಿ ಶಾಲೆ ಸ್ಟೆಂಟ್ ಆಗ್ನೆಸ್ ಸ್ಪೆಷಲ್ ಸ್ಕೂಲ್. ಆರಂಭದಲ್ಲಿ ಕೇವಲ ನಾಲ್ಕು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಶಾಲೆಯಲ್ಲಿ ಇಂದು 5 ರಿಂದ 25 ವರ್ಷ ವಯಸ್ಸಿನ 105 ವಿದ್ಯಾರ್ಥಿ ವಿದ್ಯಾರ್ಥಿನಿಯರು ಹೊಸ ಬಾಳಿನ ಹುಡುಕಾಟದಲ್ಲಿದ್ದಾರೆ.

ತಪ್ಪು ಕಲ್ಪನೆ

ಬುದ್ಧಿಮಾಂದ್ಯತೆಯ ಬಗ್ಗೆ ತಪ್ಪುಕಲ್ಪನೆಯಿರುವ ನಮ್ಮ ಸಮಾಜ ಅಂತಹವರನ್ನು ನೇರವಾಗಿ ಹುಚ್ಚರ ಸಾಲಿಗೆ ಸೇರಿಸುತ್ತದೆ. ಇದನ್ನು ವೈದ್ಯಕೀಯ ಚಿಕಿತ್ಸೆಯ ಮೂಲಕವೇ ಸಂಪೂರ್ಣ ಗುಣಪಡಿಸಲು ಅಸಾಧ್ಯವಾದ ಕಾರಣ ಅಂತಹವರು ಜೀವನದುದ್ದಕ್ಕೂ ಪರಾವಲಂಬಿಗಳಾಗಿಯೇ ಬದುಕಬೇಕಾಗುವುದು ಅನಿವಾರ್ಯವಾಗುತ್ತದೆ. ಹೆತ್ತವರ ಪಾಲಿನ ಶಾಪದ ರೂಪದಲ್ಲಿ ಬೆಳೆಯುವ ಈ ಮಕ್ಕಳಿಗೆ ಅವರ ಪ್ರೀತಿಯೂ ಕೊನೆಗೊಂಡಾಗ ಜೀವನ ದುರಂತದಲ್ಲಿ ಸಮಾಪ್ತಿ. ಹೀಗಾಗಬಾರದೆಂಬುದೇ ಈ ಶಾಲೆಯ ಉದ್ದೇಶ.

ಸಾಮಾನ್ಯ ಬುದ್ಧಿಮಾಂದ್ಯ ಮಕ್ಕಳ ಸ್ಥಿತಿಯನ್ನು ಕಂಡ ಅನುಭವದ ಆಧಾರದಲ್ಲಿ ಈ ಶಾಲೆಯ ವಾತಾವರಣವನ್ನು ಕಲ್ಪಿಸಿಕೊಂಡು ಅಲ್ಲಿಗೆ ಭೇಟಿ ನೀಡಿದರೆ ಚಟುವಟಿಕೆಯಿಂದ ಪುಟಿಯುತ್ತಿರುವ ಮಕ್ಕಳು ನಿಮಗೆ ಶಾಕ್ ನೀಡಬಲ್ಲರು.

ಒಂದೆಡೆ ಫುಟ್‌ಬಾಲ್ ಆಡುತ್ತಿರುವ ಗಂಡು ಮಕ್ಕಳು, ಮತ್ತೊಂದೆಡೆ ಶಾಲೆಯ ಎದುರಿನ ದೊಡ್ಡ ಆಲದಮರದ ಬುಡದಲ್ಲಿ ಶಿಕ್ಷಕಿಯರೊಂದಿಗೆ ಹರಟುತ್ತ ಕೂತ ಹೆಣ್ಣುಮಕ್ಕಳು. ಕೆಲವರು ಶಾಲೆಯ ಒಳಗೆ ನಿರ್ಮಲಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದರೆ, ಮತ್ತ ಕೆಲವರು ಹೂಗಿಡಗಳಿಗೆ ನೀರು ಸುರಿಯುತ್ತಿದ್ದಾರೆ. ಇವರೆಲ್ಲ ಬುದ್ಧಿಮಾಂದ್ಯರೆಂದು ಗುರುತಿಸಲ್ಪಟ್ಟು ಪೆದ್ದು ಕಳೆಯೊಂದಿಗೆ ಶಾಲೆಗೆ ಕಾಲಿಟ್ಟವರು ಎಂಬುದನ್ನು ಸ್ಮರಿಸಿಕೊಂಡರೆ ಈ ಶಾಲೆಯ ಸಾಧನೆಯ ಬಗ್ಗೆ ಹೆಚ್ಚಿನ ವಿವರ ಅಗತ್ಯವಿರುವುದಿಲ್ಲ.

ಬುದ್ಧಿಶಕ್ತಿಯ ಬೆಳವಣಿಗೆಯಲ್ಲಿನ ಕುಂಠಿತ ಸ್ಥಿತಿಯೇ ಬುದ್ಧಿಮಾಂದ್ಯತೆ ಎಂಬುದು ಸರಳ ವಿಶ್ಲೇಷಣೆ. ಇಂತಹ ಮಕ್ಕಳು ದೈಹಿಕವಾಗಿ ಬೆಳೆದರೂ, ಮಾನಸಿಕವಾಗಿ ಇನ್ನೂ ಮಗುವಾಗಿರುತ್ತಾರೆ. ದೇಹ ಮತ್ತು ಮೆದುಳಿನ ಅಸಮತೋಲನ ಬೆಳವಣಿಗೆಯಿಂದಾಗಿ ಇಂತಹ ಸ್ಥಿತಿ ನಿರ್ಮಾಣ. ತಮ್ಮ ಸ್ವಂತ ಕೆಲಸಗಳನ್ನು. ಮಾಡಲಾಗದ ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ನೀಡಲಾಗದ ಇಂತಹ ಮಕ್ಕಳು ಗ್ರಹಣ ಶಕ್ತಿ, ಸ್ಮರಣಶಕ್ತಿ ಬಹುತೇಕ ಶೂನ್ಯ.

ಶಿಕ್ಷಣ ವಿಧಾನ

ಇಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಹಂತಗಳಲ್ಲಿ ನೀಡಲಾಗುವ ಶಿಕ್ಷಣ ಸಾಮಾನ್ಯ ಶಿಕ್ಷಣ ಕ್ರಮದಿಂದ ಭಿನ್ನವಾಗಿದ್ದು ಬುದ್ಧಿಮಾಂದ್ಯ ಮಕ್ಕಳ ಮನಸ್ಥಿತಿಗೆ ಹೊಂದಿಕೊಂಡಂತೆ ವೈಜ್ಞಾನಿಕ ನೆಲೆಯಲ್ಲಿ ರೂಪಿಸಲಾಗಿದೆ. ಸಾಮಾನ್ಯ ಶಾಲೆಗಳಲ್ಲಿ ವಿದ್ಯಾರ್ಥಿಗಳ ಮಾನಸಿಕ ಮಟ್ಟವನ್ನೂ ಅವರ ವಯಸ್ಸಿಗೆ ಅನುಗುಣವಾಗಿ ನಿರ್ಧರಿಸಿದರೆ ಇಲ್ಲಿ ಅದರ ಮಾಪನ ತೀರಾ ಭಿನ್ನ. ಮಾನಸಿಕ ಪ್ರಬುದ್ಧತೆಯನ್ನು ಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳುವ ಈ ಶಾಲೆಯಲ್ಲಿ 15 ವರ್ಷದ ಬಾಲಕನೊಬ್ಬ ಎರಡನೇ ದರ್ಜೆಯಲ್ಲೂ ಕಲಿಯುತ್ತಿರಬಹುದು.

ಸಾಮಾನ್ಯ ಮಕ್ಕಳು ಬೋಧನೆಯಿಂದ ಕಲಿಯುವುದಕ್ಕಿಂತಲೂ ಹೆಚ್ಚಾಗಿ ಪರಿಸರವನ್ನು ವೀಕ್ಷಿಸಿ ಗ್ರಹಿಸುವ ಮೂಲಕ ಹೆಚ್ಚು ತಿಳಿದು ಕೊಳ್ಳುತ್ತಾರೆ. ಆದರೆ ಈ ಗ್ರಹಣಶಕ್ತಿ ಬುದ್ಧಿಮಾಂದ್ಯ ಮಕ್ಕಳಲ್ಲಿ ಬಹುತೇಕ ಲೋಪವಾಗಿರುವುದರಿಂದ ಅವರಿಗೆ ಪ್ರತಿಯೊಂದು ಸಣ್ಣ ಕೆಲಸಗಳನ್ನೂ ಹೇಳಿಕೊಡಬೇಕಾಗುತ್ತದೆ. "ನಮಗೆ ಕಲಿಸುವ ವಿಧಾನ ತಿಳಿದಿದ್ದರೆ ಎಲ್ಲಾ ಮಕ್ಕಳು ಕಲಿಯಲು ಸಾಧ್ಯ" ಎನ್ನುವ ಇಲ್ಲಿನ ಪ್ರಿನ್ಸಿಪಾಲ್ ಮರಿಯಾ ಜ್ಯೋತಿ ಅವರ ಆತ್ಮವಿಶ್ವಾಸದ ಮಾತು ಇಲ್ಲಿನ ವಿಶಿಷ್ಟ ಶಿಕ್ಷಣ ವಿಧಾನ ಗಮನಿಸಿದಾಗ ಸರಿಯೆನಿಸುತ್ತದೆ.

ಅಕ್ಷರಭ್ಯಾಸವಾಗಲಿ ಇಲ್ಲವೇ ಇತರ ವಿಷಯಗಳ ಬೋಧನೆ ನೀಡುವ ಮೊದಲು, ಬೋಧನೆಯ ಗ್ರಾಹ್ಯಕ್ಕಾಗಿ ಬುದ್ಧಿಮಾಂದ್ಯ ಮಕ್ಕಳಲ್ಲಿ ಮಾನಸಿಕವಾದ ಸಿದ್ಧಸ್ಥಿತಿಯನ್ನು ನಿರ್ಮಾಣ ಮಾಡುವುದು ಇಲ್ಲಿನ ಶಿಕ್ಷಣ ಕ್ರಮದ ಪ್ರಮುಖ ಅಂಶ. ಇದು ಅತ್ಯಂತ ಕಠಿಣವಾದ ಮತ್ತು ಅಪಾರವಾದ ತಾಳ್ಮೆಯನ್ನು ಬೇಡುವ ಕೆಲಸವೂ ಹೌದು.

ಸಿಂತಲ್ಲಿ ನಿಲ್ಲದೆ, ಓಡುತ್ತಾ ಕುಣಿಯುತ್ತಾ ಇರುವ ಉದ್ರಿಕ್ತಸ್ಥಿತಿ ಕೆಲವರದ್ದಾದರೆ, ಯಾವುದೇ ಕ್ರಿಯೆಗೆ ಪ್ರತಿಕ್ರಿಯಿಸದೆ ಬೆಪ್ಪಾಗಿ ಕುಳಿತಿರುವ ಮಂಕುಸ್ಥಿತಿ ಇನ್ನು ಹಲವರದ್ದು. ಇವರ ಚಟುವಟಿಕೆಗಳನ್ನು ಒಂದು ಶಿಸ್ತುಬದ್ಧ ಚೌಕಟ್ಟಿನೊಳಗೆ ಬಂಧಿಸಿಡುವುದು ಪ್ರಾರಂಭದ ಹಂತ.

ಈ ಶಾಲೆಗೆ ಸೇರುವ ಮಕ್ಕಳಲ್ಲಿ ಬಹು ಸಂಖ್ಯಾತರು ತಮ್ಮ ಸ್ವಂತ ಕೆಲಸಗಳಾದ ಆಹಾರ ಸೇವನೆ, ಸ್ನಾನ ಮಲಮೂತ್ರ ವಿಸರ್ಜನೆ ಮುಂತಾದವುಗಳನ್ನು ಸ್ವಂತವಾಗಿ ಮಾಡಲಾಗದ ಪರಾವಲಂಬಿಗಳು.

ಈ ದೃಷ್ಟಿಯಿಂದ ಶಿಕ್ಷಣದ ಮೊದಲ ಹಂತದಲ್ಲಿ ಸ್ವ–ಸಹಾಯ (self-help) ತರಬೇತಿ ನೀಡಲಾಗುತ್ತದೆ. ಇದರಲ್ಲಿ ಆಹಾರ ಸೇವನೆ ದೈಹಿಕ ಶುಚಿತ್ವ, ಮಲಮೂತ್ರ ವಿಸರ್ಜನೆ, ಅಸ್ಖಲಿತ ಸಂಭಾಷಣೆ, ಅಂಗಾಂಗಗಳ ಚಲನೆಯಲ್ಲಿನ ಸಮತೋಲನೆ ಇತ್ಯಾದಿ ಬಗ್ಗೆ ಹೇಳಿಕೊಡಲಾಗುತ್ತದೆ.

ಈ ಹಂತವನ್ನು ಯಶಸ್ವಿಯಾಗಿ ದಾಟಿ ಬಂದ ಮಕ್ಕಳನ್ನು ವಿದ್ಯಾಭ್ಯಾಸ ಪಡೆಯಲು ಮಾನಸಿಕವಾಗಿ ತಯಾರಿಗೊಳಿಸಲಾಗುತ್ತದೆ. ಒಗಟುಗಳನ್ನು ಬಿಡಿಸುವುದು, ಚಿತ್ರಕಲೆ, ಬಣ್ಣಗಾರಿಕೆ ಸಚಿತ್ರ ಪಾಠ, ಸಂಖ್ಯಾಜ್ಞಾನ ಇವುಗಳ ಮೂಲಕ ಅವರನ್ನು ವಿದ್ಯಾಭ್ಯಾಸ ಕ್ರಮಕ್ಕೆ ಸಿದ್ಧಗೊಳಿಸಲಾಗುತ್ತದೆ.

ಮೂರನೇ ಹಂತದಲ್ಲಿ ನೀಡಲಾಗುವ ಶಿಕ್ಷಣ ಸಾಮಾನ್ಯ ಶಾಲೆಗಳ ಪಠ್ಯಕ್ರಮವನ್ನೇ ಹೊಂದಿದ್ದು ಓದುಬರಹ, ಲೆಕ್ಕ ವಿಜ್ಞಾನ ಸಮಾಜಶಾಸ್ತ್ರ ಮೊದಲಾದ ವಿಷಯಗಳನ್ನು ಒಳಗೊಂಡಿದೆ. ಈ ತರಗತಿಗೆ ಸೇರಲು ಬೇಕಾದ ಅರ್ಹತೆಯನ್ನು ಪರಿಗಣಿಸುವಾಗ ದೈಹಿಕ ವಯಸ್ಸನ್ನು ಗಣಿಸದೆ ಮಾನಸಿಕ ವಯಸ್ಸನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಸ್ಟೆಂಟ್ ಆಗ್ನೆಸ್ ಸ್ಪೆಶಲ್ ಸ್ಕೂಲ್

ಈ ಕಾರಣದಿಂದಲೇ ಸಾಮಾನ್ಯ ಶಾಲೆಗಳಲ್ಲಿ ಇವರ ಮುಂದಿನ ಶಿಕ್ಷಣ ಅಸಾಧ್ಯವಾಗುತ್ತಿದೆ. ಶಾಲೆಯಲ್ಲಿ ಐದನೇ ದರ್ಜೆಯಲ್ಲಿ ಪಾಸಾದ ವಿದ್ಯಾರ್ಥಿಗೆ 15 ವರ್ಷ ಆಗಿದ್ದರೆ ಆತನಿಗೆ ಸಾಮಾನ್ಯಶಾಲೆಗಳಲ್ಲಿ ತನಗಿಂತ ಕಿರಿಯ ವಯಸ್ಸಿನ ಮಕ್ಕಳ ಜತೆ ಕಲಿಯುವಾಗ ಸಹಜವಾಗಿಯೇ ಅವರಿಗೆ ಮುಜುಗರವಾಗುತ್ತದೆ. ಇದರಿಂದಾಗಿ ಬಹುತೇಕ ಮಕ್ಕಳು ತಮ್ಮ ಶಿಕ್ಷಣ ಮುಂದುವರಿಸಲಾಗದೆ ಅಸಹಾಯಕರಾಗುತ್ತಿದ್ದಾರೆ.

ಇಲ್ಲಿ ತರಬೇತಾದ ಮಕ್ಕಳನ್ನು ಸಮಾಜ ಇತರ ಸಾಮಾನ್ಯ ಮಕ್ಕಳಂತೆ ಮುಕ್ತಮನಸ್ಸಿನಿಂದ ಸ್ವಾಗತಿಸದೆ ಸಂಶಯ ದೃಷ್ಟಿಯಿಂದಲೇ ನೋಡುತ್ತದೆ. ಇದರಿಂದ ಅವರಿಗೆ ಸ್ವಾವಲಂಬಿ ಜೀವನವನ್ನು ಪ್ರಾರಂಭಿಸುವುದು ಅಸಾಧ್ಯವಾಗುತ್ತಿದೆ.

ವೃತ್ತಿಪರ ಶಿಕ್ಷಣ

ಈ ದೃಷ್ಟಿಯಿಂದ ಇಲ್ಲಿ ವೃತ್ತಿಪರ ಶಿಕ್ಷಣವನ್ನು ನೀಡಲಾಗುತ್ತಿದೆ. ಇತ್ತೀಚೆಗಷ್ಟೇ ಪ್ರಾರಂಭಗೊಂಡ ಈ ಶಿಕ್ಷಣ ವಿಭಾಗಕ್ಕೆ ಪ್ರತ್ಯೇಕ ಕಾರ್ಯಾಗಾರವೊಂದನ್ನು ನಿರ್ಮಿಸಲಾಗಿದೆ. ಈ ಕಾರ್ಯಾಗಾರದಲ್ಲಿ ಬಡಗಿ ಕೆಲಸ, ಬೆತ್ತದಿಂದ ವಸ್ತುಗಳ ತಯಾರಿ, ಲಕೋಟೆ ತಯಾರಿಕೆ, ತೆಂಗಿನ ನಾರಿನಿಂದ ನಿತ್ಯೋಪಯೋಗಿ ಸಲಕರಣೆಗಳ ತಯಾರಿ ಮತ್ತು ಚಿತ್ರಕಲೆ ಇವೇ ಮುಂತಾದ ಕುಶಲಕಲೆಗಳ ಬಗ್ಗೆ ಹೇಳಿಕೊಡಲಾಗುತ್ತಿದೆ. ಇದರ ಜತೆಯಲ್ಲಿ ಸಮಯನಿಷ್ಠೆ, ಸಹನೆ, ಸಹಕಾರ ಮನೋಭಾವ ಈ ಬಗ್ಗೆಯೂ ಶಿಕ್ಷಣ ನೀಡಲಾಗುತ್ತಿದೆ.

ಹೆಣ್ಣು ಮಕ್ಕಳಿಗೆ ಗೃಹ ವಿಜ್ಞಾನ ಶಿಕ್ಷಣವನ್ನು ನೀಡುವ ಕಾರ್ಯಕ್ರಮವನ್ನೂ ಈ ಶಾಲೆ ಹಮ್ಮಿಕೊಂಡಿದೆ. ಮನೆ ವ್ಯವಹಾರಗಳ ನಿರ್ವಹಣೆ, ಅಡಿಗೆ ತಯಾರಿ, ಆರೋಗ್ಯ ಮತ್ತು ಶುಚಿತ್ವ ಆಹಾರ ಮತ್ತು ಪೌಷ್ಟಿಕಾಂಶಗಳ ಪ್ರಾಮುಖ್ಯತೆ, ಮನೆಮದ್ದು, ಸುರಕ್ಷತೆ ಮತ್ತು ಪ್ರಥಮಚಿಕಿತ್ಸೆ ಮತ್ತು ಕಸೂತಿ ಕೆಲಸಗಳ ಬಗ್ಗೆ ತರಬೇತಿ ನೀಡುವ ಮೂಲಕ ಅವರನ್ನು ಉತ್ತಮ ಗೃಹಿಣಿಯರನ್ನಾಗಿ ರೂಪಿಸಲಾಗುತ್ತಿದೆ.

ವೃತ್ತಿ ಕಾರ್ಯಾಗಾರದಲ್ಲಿ ತರಬೇತಿ ನಿರತ ವಿದ್ಯಾರ್ಥಿಗಳು

ಕರಕುಶಲ ತರಬೇತಿಯಲ್ಲಿ ವಿದ್ಯಾರ್ಥಿನಿಯರು

ಹಲವಾರು ಬುದ್ಧಿಮಾಂದ್ಯ ಮಕ್ಕಳು ಇಲ್ಲಿ ತರಬೇತಿ ಪಡೆದ ನಂತರ ಈಗ ಸಾಮಾನ್ಯಶಾಲೆಗಳಿಗೆ ಮರಳಿ ಶಿಕ್ಷಣ ಪಡೆಯುತ್ತಿದ್ದಾರೆ. ಕೆಲವರು ಸ್ವ–ಉದ್ಯೋಗದಲ್ಲಿ ನಿರತರಾಗಿದ್ದಾರೆ. ಇಬ್ಬರು ಹುಡುಗರು ಲಾಂಡ್ರಿ ಮತ್ತು ಸೋಡಾ ಅಂಗಡಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಒಬ್ಬ ಹುಡುಗ ಕೊಲ್ಲಿ ದೇಶದಲ್ಲಿ ಟೇಪ್ ಮುದ್ರಣ ಕೆಲಸದಲ್ಲಿದ್ದಾನೆ.

ಸಾಧನೆಯ ನೋಟ

ಕಳೆದ ಹದಿನೈದು ವರ್ಷಗಳಲ್ಲಿ ಈ ಶಾಲೆ ಸಾಧಿಸಿದ ಪ್ರಗತಿ ಹೆಮ್ಮೆಪಟ್ಟುಕೊಳ್ಳುವಂತಹದ್ದು. ಸಂಪೂರ್ಣ ನಿರುಪಯುಕ್ತರಾಗಿ ಮಾಂಸದ ಮುದ್ದೆಯಂತಿದ್ದು ಈ ಶಾಲೆಗೆ ಸೇರಿಸಲ್ಪಟ್ಟ ಹೆಚ್ಚಿನ ಮಕ್ಕಳು ಈಗ ಆಹಾರ ಸೇವನೆ ಮಲಮೂತ್ರವಿಸರ್ಜನೆ ಸ್ನಾನ ಮುಂತಾದ ಸ್ವಂತ ಕೆಲಸಗಳನ್ನು ಸ್ವಾವಲಂಬಿಗಳಾಗಿ ಮಾಡಲು ಶಕ್ತರಾಗಿದ್ದಾರೆ.

ನಡಿಗೆಯೇ ಗೊತ್ತಿರದ ಮಕ್ಕಳು ನಡೆಯುತ್ತಿದ್ದಾರೆ. ಅಳು–ಅರಚಾಟ ಮಾತ್ರ ಗೊತ್ತಿದ್ದ ಮಕ್ಕಳು ಸಂಯಮದಿಂದ ಸಂಭಾಷಿಸುತ್ತಿದ್ದಾರೆ. ಹಲವು ಮಕ್ಕಳು ಹೆತ್ತವರ ಸಹಾಯವಿಲ್ಲದೆ ಶಾಲೆಗೆ ಬರುತ್ತಿದ್ದಾರೆ. ಬುದ್ಧಿಮಾಂದ್ಯನಾಗಿದ್ದ ಹನ್ನೆರಡು ವರ್ಷದ ಹುಡುಗನೊಬ್ಬ ಮೂರು ಕಿ. ಮೀ. ದೂರದ ಮನೆಯಿಂದ ಸೈಕಲ್ ಮೇಲೆ ಏಕಾಂಗಿಯಾಗಿ ಶಾಲೆಗೆ ಬರುತ್ತಿದ್ದಾನೆ. ಇದು ಈ ಶಾಲೆಯ ಸಾಧನೆಯ ಪಕ್ಷಿನೋಟವನ್ನು ಮಾತ್ರ ನೀಡುತ್ತಿದೆ.

ಕ್ರೀಡೆಯಲ್ಲೂ ಮುಂದು

ಕ್ರೀಡಾ ಕ್ಷೇತ್ರದಲ್ಲಿ ಈ ಶಾಲೆಯ ಮಕ್ಕಳದು ಹೆಗ್ಗಳಿಕೆಯ ಸಾಧನೆ. 1978ರಲ್ಲಿ ಬೆಂಗಳೂರಿನಲ್ಲಿ ಜರುಗಿದ ಎರಡನೇ ಪ್ರಾದೇಶಿಕ ಕ್ರೀಡಾಕೂಟದಲ್ಲಿ ಇಲ್ಲಿನ 18 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದು ಒಂಭತ್ತು ಸಂಸ್ಥೆಗಳಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ.

ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸಿ ಬಹುಮಾನ ಪಡೆದಿರುವ ಇಲ್ಲಿನ ವಿದ್ಯಾರ್ಥಿ ಕ್ರೀಡಾಳುಗಳು ಬೆಂಗಳೂರಿನಲ್ಲಿ ಜರುಗಿದ ಕ್ರೀಡಾಕೂಟದಲ್ಲೂ ಚಾಂಪಿಯನ್‌ಷಿಪ್ ಗಳಿಸಿದ್ದಾರೆ.

ಬುದ್ಧಿಮಾಂದ್ಯ ಮಕ್ಕಳ ಚಿಕಿತ್ಸೆಗೆ ಬೇಕಾಗಿರುವುದು ಔಷಧಿಯಲ್ಲ; ಮಾನವೀಯ ಪ್ರೀತಿ ಮತ್ತು ಆಸರೆ ಎನ್ನುತ್ತಾರೆ ಇಲ್ಲಿನ ಪ್ರಿನ್ಸಿಪಾಲ್ ಮರಿಯ ಜ್ಯೋತಿ. ಮನೆಯಲ್ಲಿ ಹೆತ್ತವರು ಅವರೊಂದಿಗೆ ಯಾವುದೇ ಪೂರ್ವಾಗ್ರಹ ಇಟ್ಟುಕೊಳ್ಳದೆ ಇತರ ಮಕ್ಕಳಂತೆ ಸಮಾನ ದೃಷ್ಟಿಯಿಂದ ವ್ಯವಹರಿಸಬೇಕು ಎನ್ನುತ್ತಾರೆ ಅವರು.

ಈ ಮಕ್ಕಳು ಸಮಾಜದಲ್ಲಿನ ಇತರ ಮಕ್ಕಳೊಂದಿಗೆ ಕೂಡಿಕೊಂಡು ಇರುವುದು ಅವರ ಸುಧಾರಣೆಗೆ ಅನುಕೂಲ. ದಿನವಿಡೀ ಅವರು ತಮ್ಮಂತೆ ಇರುವ ಮಕ್ಕಳ ಜತೆಯಲ್ಲಿಯೇ ಕಳೆಯುವುದರಿಂದ ಅನುಕರಣೆಯಿಂದ ಕಲಿತುಕೊಳ್ಳುವ ಅವಕಾಶವಿರುವುದಿಲ್ಲ.

ಈ ದೃಷ್ಟಿಯಿಂದಲೇ ಇಲ್ಲಿ ಹಾಸ್ಟೆಲ್ ಸೌಲಭ್ಯವನ್ನು ಕಲ್ಪಿಸಿಲ್ಲ. ಇದರಿಂದಾಗಿ ದೂರದ ಊರುಗಳಿಂದ ಬರುವ ಮಕ್ಕಳಿಗೆ ಅನಾನುಕೂಲವಾಗುತ್ತಿದೆ. ಇದಕ್ಕಿರುವ [illegible] ಪರಿಹಾರವೆಂದರೆ ಸಾರ್ವಜನಿಕರು ಇಂತಹ ಮಕ್ಕಳನ್ನು ದತ್ತು ತೆಗೆದುಕೊಳ್ಳುವುದು.

ಈಗಾಗಲೇ ನಗರದಲ್ಲಿನ ಏಳು ಕುಟುಂಬಗಳು ಏಳು ಮಕ್ಕಳನ್ನು ತಮ್ಮ ಮನೆಯಲ್ಲಿರಿಸಿಕೊಂಡು ನೋಡಿಕೊಳ್ಳುತ್ತಿದ್ದಾರೆ. ಬುದ್ಧಿಮಾಂದ್ಯ ಮಕ್ಕಳ ಬಗೆಗಿನ ತಪ್ಪು ಕಲ್ಪನೆ ಅಳಿದಾಗ ಇಂತಹ ಸಹಕಾರ ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗಬಹುದು ಎನ್ನುವ ನಿರೀಕ್ಷೆ ಶಾಲೆಯ ಪ್ರಿನ್ಸಿಪಾಲರದು.

ಪ್ರಿನ್ಸಿಪಾಲ್ ಮರಿಯಾ ಜ್ಯೋತಿ (ಮೊದಲ ಸಾಲಿನಲ್ಲಿ ಎಡದಿಂದ ಎರಡನೆಯವರು) ಅವರೊಂದಿಗೆ ಅಧ್ಯಾಪಕ ವರ್ಗ

ಮೂಗ ಕಂಪ್ಯೂಟರ್ ಪಾಂಡು

'ಮೇ 1 ಯಾವ ವಾರ?'

'ಬುಧವಾರ'

—ಪ್ರಶ್ನಿಸಿದ ಬಾಯಿ ಮುಚ್ಚುವುದರೊಳಗೆ ಉತ್ತರ ಸಿದ್ಧ

—ಉತ್ತರ ನೀಡಿದ್ದು ಕಂಪ್ಯೂಟರ್ ಅಲ್ಲ. ಈ ಶಾಲೆಯ ವಿದ್ಯಾರ್ಥಿ ಪಾಂಡುರಂಗ ಶೆಟ್ಟಿ.

ಯಾವುದೇ ದಿನಾಂಕವನ್ನು ಹೇಳಿದರೂ ಥಟ್ಟನೆ ಆ ದಿನದ ವಾರದ ಹೆಸರು ಹೇಳಬಲ್ಲ ಈತ ಕಳೆದ ಬಾರಿ ಪುರಭವನದಲ್ಲಿ ನಡೆದ ಶಾಲಾ ವಾರ್ಷಿಕೋತ್ಸವದ ಸಂದರ್ಭದಲ್ಲಿ ತನ್ನ ಈ ವಿಶಿಷ್ಟ ಪ್ರತಿಭೆಯ ಮೂಲಕ ಪ್ರೇಕ್ಷಕರನ್ನು ದಿಗ್ಭ್ರಮೆಗೊಳಿಸಿದ್ದ.

ಮೆದುಳಿಗೆ ಉಂಟಾದ ಹಾನಿಯಿಂದಾಗಿ ಬುದ್ಧಿಮಾಂದ್ಯ ಬಾಲಕನಾಗಿ ಬೆಳೆದ ಪಾಂಡುರಂಗ ಶೆಟ್ಟಿ, ಈ ಶಾಲೆಗೆ ಸೇರಿದಾಗ ತೀರಾ ಉದ್ರಿಕ್ತ ಸ್ಥಿತಿಯಲ್ಲಿದ್ದನಂತೆ. ಈತನನ್ನು ನಿಯಂತ್ರಣದಲ್ಲಿಡುವುದೇ ಇಲ್ಲಿನ ಪ್ರಾಧ್ಯಾಪಕ ವರ್ಗಕ್ಕೆ ಒಂದು ಸಾಹಸವಾಗಿತ್ತು. ಯೋಗ ತರಬೇತಿಯ ಮೂಲಕ ನಿಧಾನವಾಗಿ ಸುಧಾರಿಸಿದ ಶೆಟ್ಟಿ ಈಗ ತನ್ನ ಜವಾಬ್ದಾರಿ ಅರಿತ ಒಬ್ಬ ಪ್ರಬುದ್ಧ ಯುವಕ. ಈತನ ವಿಶೇಷ ಪ್ರತಿಭೆ ಬೆಳಕಿಗೆ ಬಂದದ್ದು 1980ರ ಏಪ್ರಿಲ್ 10ರಂದು. ಅಂದು ನೇರವಾಗಿ ಪ್ರಿನ್ಸಿಪಾಲರ ಕೋಣೆಗೆ ನುಗ್ಗಿದ ಪಾಂಡುರಂಗ ಶೆಟ್ಟಿ "ಶಾಲೆ ಪುನರಾರಂಭ ಯಾವಾಗ ಮೇಡಂ? ಎಂದು ಪ್ರಶ್ನಿಸಿದನಂತೆ. ಜೂನ್ ಒಂದಕ್ಕೆ ಎಂದು ಪ್ರಿನ್ಸಿಪಾಲರು ಉತ್ತರಿಸುವ ಮೊದಲೇ, ಈತ ಉತ್ತರಿಸಿದ್ದ "ಆ ದಿನ ಭಾನುವಾರ ಶಾಲೆಗೆ ರಜೆ" ದಿಗ್ಭ್ರಮೆಗೊಳಗಾದ ಪ್ರಿನ್ಸಿಪಾಲರಿಗೆ ನಿಧಾನವಾಗಿ ಅರಿವಾಯಿತು— ತಮ್ಮೆದುರು ನಿಂತ ಬಾಲಕನ ಅಸಾಮಾನ್ಯ ಪ್ರತಿಭೆ.

ಈಗ ಇಂಗ್ಲಿಷ್– ಕನ್ನಡಗಳೆರಡರಲ್ಲಿಯೂ ಓದು ಬರಹ ಬಲ್ಲ ಪಾಂಡುರಂಗ ಶೆಟ್ಟಿ ಪ್ರಸಕ್ತ ವೃತ್ತಿ ತರಬೇತಿ ಕೇಂದ್ರದಲ್ಲಿ ಶಿಕ್ಷಣ ಪಡೆಯುತ್ತಿದ್ದಾನೆ. ಇದರ ಜತೆಯಲ್ಲಿ ಇಲ್ಲಿನ ವಿದ್ಯಾರ್ಥಿಗಳ ಮೇಲ್ವಿಚಾರಣೆ ಕಾರ್ಯದಲ್ಲಿ ಅಧ್ಯಾಪಕಿಯರಿಗೆ ನೆರವಾಗುತ್ತಿದ್ದಾನೆ.

ನೃತ್ಯಗಾರ್ತಿ ಹೆಲೆನ್

ಕಳೆದ ವರ್ಷ ಪುರಭವನದಲ್ಲಿ ನಡೆದ ಶಾಲಾ ವಾರ್ಷಿಕೋತ್ಸವದ ಸಂದರ್ಭದಲ್ಲಿ ಆಕರ್ಷಕ ನೃತ್ಯದ ಮೂಲಕ ಪ್ರೇಕ್ಷಕರನ್ನು ಮಂತ್ರ ಮುಗ್ಧಗೊಳಿಸಿದ ಹೆಲೆನ್ ಎನ್ನುವ ಹದಿನಾರರ ಹರೆಯದ ಹೊಡಗಿ ಹತ್ತು ವರ್ಷಗಳ ಹಿಂದೆ ಈ ಶಾಲೆಗೆ ಸೇರಿಸಲ್ಪಟ್ಟ ಒಬ್ಬ ಸಾಮಾನ್ಯ ಬುದ್ಧಿಮಾಂದ್ಯ ಬಾಲಕಿ.

ಈಗ ನೃತ್ಯದಲ್ಲಿ ವಿಶೇಷ ಪ್ರತಿಭೆ ಹೊಂದಿರುವ ಈಕೆ, ಕಳೆದ ಬಾರಿಯ ಮೂರನೆಯ ಅಖಿಲ ಭಾರತ ಪ್ರತಿಭಾ ಸ್ಪರ್ಧೆಯ "ಕೋಟಿ" ನೃತ್ಯದಲ್ಲಿ ಪ್ರಥಮ ಬಹುಮಾನ ವಿಜೇತೆ. ಜಪಾನಿನಲ್ಲಿ ನಡೆಯಲಿರುವ ನೃತ್ಯ ಪ್ರದರ್ಶನದಲ್ಲಿ ಪಾಲ್ಗೊಳ್ಳಲಿರುವ ಭಾರತೀಯ ತಂಡಕ್ಕೂ ಹೆಲೆನ್ ಆಯ್ಕೆಯಾಗಿದ್ದಾರೆ.

ಆರು ವರ್ಷದ ಬಾಲಕಿಯಾಗಿದ್ದಾಗ ಈ ಶಾಲೆಗೆ ಸೇರಿದ ಹೆಲೆನಳ ಆಗಿನ ಮಾನಸಿಕ ಪ್ರಬುದ್ಧತೆ ಕೇವಲ ಎರಡು ವರ್ಷದ ಮಗುವಿನಷ್ಟಿತ್ತಂತೆ. ಸ್ಪಷ್ಟವಾಗಿ ಮಾತನಾಡಲಾಗದ, ಅಂಗಾಂಗಗಳನ್ನು ಸಮತೋಲನದಲ್ಲಿಟ್ಟು ನಡೆಯಲಾಗದ ಈಕೆಗೆ ಇತರ ಮೂವರು ವಿದ್ಯಾರ್ಥಿಗಳೊಂದಿಗೆ ವಿಶೇಷ ಮಮತೆ ಮತ್ತು ಶ್ರದ್ಧೆಯಿಂದ ಶಿಕ್ಷಣ ನೀಡಲಾಯಿತು. ಈಗ ಹೆಲೆನಳ ವಿದ್ಯಾಭ್ಯಾಸದ ಮಟ್ಟ 6ನೇ ದರ್ಜೆಯದ್ದಾಗಿದೆ. ಇಂಗ್ಲೀಷ್ ಕನ್ನಡ ಭಾಷೆಗಳೆರಡರಲ್ಲಿಯೂ ಓದಿ ಬರೆಯ ಬಲ್ಲ ಈಕೆ ಈಗ ವಿದ್ಯಾರ್ಥಿಗಳನ್ನು ನೋಡಿಕೊಳ್ಳಲು ಶಾಲೆಯ ಅಧ್ಯಾಪಕಿಯರಿಗೆ ನೆರವಾಗುತ್ತಿದ್ದಾಳೆ.

ಸಾಹಿತ್ಯ

ಕೆಟ್ಟ ಕನಸುಗಳ ಕಪ್ಪು ಸಮುದ್ರ

ಅಪ್ಪಯ್ಯನಿಗೆ ನಾನೊಬ್ಬನೇ ಮಗನಾಗಿರದಿದ್ದರೆ ಅಥವಾ ಚಂದ್ರಾಳನ್ನು ನಾನು ಪ್ರೀತಿಸದೇ ಇರುತ್ತಿದ್ದರೆ ಬಹುಶಃ ನಾನಿಂದು ಬಾಂದ್ರದ ಈ ರಸ್ತೆಗಳಲ್ಲಿ ಅರೆ ಹುಚ್ಚನಂತೆ ಅಲೆಯುತ್ತಿರಲಿಲ್ಲ. ದಾದರ್‌ನ 'ಫಿಶ್‌ಲ್ಯಾಂಡ್' ಬಾರ್‌ನಲ್ಲಿ ಟ್ರಾವೆಲ್ಸ್‌ಗೆಳೆಯ ವೆಂಕಟೇಶ್ ಜೊತೆ ಕುಳಿತಿರುತ್ತಿದ್ದೆನೋ. ಥಾಣೆಯ 'ಮೈ ಡ್ರೀಮ್' ರೆಸ್ಟೋರೆಂಟ್‌ನಲ್ಲಿ ಕುಳಿತು ಗೆಳೆಯ ಸೋಮಶೇಖರ್ ರೊಂದಿಗೆ ತನ್ನ ಮನದ ಅಳಲನ್ನು ತೋಡಿಕೊಳ್ಳುವಾಗಲೋ ಬೀರ್‌ನ ನೊರೆಯಲ್ಲಿ ಅಪ್ಪಯ್ಯನ ಕನಸುಗಳು ಉಕ್ಕೇರಿ ಬಂದಂತೆ ಭಾಸವಾಗಿ ನನ್ನನ್ನು ಇನ್ನಷ್ಟು ಮಾನಸಿಕ ಉದ್ವಿಗ್ನತೆಗೆ ಒಳಗು ಮಾಡುತ್ತದೆ. ಚಂದ್ರಾಳ ಚೆಲ್ಲು ಮುಖ, ಅವಳ ಹುಚ್ಚು ಕಲ್ಪನೆಗಳು ನೆನಪಾಗಿ ಬಂದು ಹಿಂಸಿಸುತ್ತದೆ. ನಿಜ ಹೇಳಬೇಕೆಂದರೆ ಅವರಿಬ್ಬರು ಬದುಕಿರುವವರೆಗೂ ನನ್ನನ್ನು ಮಾನಸಿಕವಾಗಿ ಅಷ್ಟಾಗಿ ಕಾಡಿರಲಿಲ್ಲ. ಆದರೆ ಸತ್ತ ನಂತರ, ನನ್ನ ಆಲೋಚನೆಗಳ ಮೇಲೆ, ನನ್ನ ಬದುಕಿನ ಮೇಲೆ ಆಕ್ರಮಣವನ್ನು ಮಾಡತೊಡಗಿ ಇಡಿ ಇಡಿಯಾಗಿ ನನ್ನನ್ನು ಹಿಂಸಿಸುತ್ತಿದ್ದಾರೆ.

ಬಯಲು ಸೀಮೆಯ ಆ ಬರಡು ನೆಲದಲ್ಲಿ ನಾನೊಬ್ಬ ಡಾಕ್ಟರನ, ಇಂಜನಿಯರನ ಅಥವಾ ಕಮಿಷನರ್‌ನ ತಂದೆಯೆನಿಸಿ ಕೊಳ್ಳಬೇಕೆಂಬ ಅಪ್ಪಯ್ಯನ ತೀವ್ರವಾದ ಹಂಬಲವನ್ನು ನನ್ನ ವಿಚಿತ್ರ ವ್ಯಾಸನಿಸಂಗಳು ಶಿವಂಗಿಬಿದಂತೆ ನುಂಗಿ ಹಾಕಿದ್ದವು. ಈ ಬೊಂಬಾಯಿಯ ಸಂಜೆಯ ಕೆಂಪು ದೀಪಗಳು, ಮೆರಿನ್ ಬೀಚಿನ ಅಲೆಗಳು ಅವನ ಕನಸುಗಳ ಕೋಟೆಯನ್ನು ಬುಡಮೇಲು ಮಾಡಿದ್ದವು. ನನ್ನಲ್ಲಿ ವಿಚಿತ್ರ ಭಾವನೆಗಳನ್ನು ಹುಟ್ಟಿಸಿ ನನ್ನನ್ನೊಬ್ಬ ಕತೆಗಾರನನ್ನಾಗಿ ಮಾಡಿದ್ದವು. ಅಪ್ಪಯ್ಯನ ಆಸೆಗಳ ಕಾಡಿಗೆ ಬೆಂಕಿ ಇಟ್ಟು ಅವನ ಆಲೋಚನೆಗಳ ವಿರುದ್ಧವಾಗಿ, ಭಾವನೆಗಳ ಕಲ್ಪನೆಗಳ ದಾಸನಾಗಿ ಕತೆಗಾರನಾದದ್ದು ನನ್ನ ತಪ್ಪಿರಬೇಕೆಂದು ನನ್ನಲ್ಲಿ ನಾನೇ ನಿರಂತರವಾಗಿ ಹುಡುಕಾಡುತ್ತಿದ್ದೇನೆ.

"ನಿನ್ನ ಕತೆಗಳಿಗೆ ಬೆಂಕಿ ಹಚ್ಚು. ಇನ್ನೊಬ್ಬ ಮಗ ಇದ್ದಿದ್ರೆ ನೀನೇನಾದರೂ ಆಗಿ ಹಾಳಾಗಿ ಹೋಗು ಅಂತಿದ್ದೆ. ನನ್ನ ವಂಶವನ್ನೆ ಸರ್ವನಾಶ ಮಾಡಿ ಬಿಟ್ಟೆ. ಮಹಾ ಕ್ರಾಂತಿಕಾರ ನೀನು. ಸಮಾಜೋದ್ಧಾರಕ" ಎಂದು ಅಪ್ಪಯ್ಯ ಕೂಗಾಡಿದ್ದು ಖಂಡಿತವಾಗಿಯೂ ನಾನು ಮೊದಲ ಬಾರಿಗೆ ಕತೆ ಬರೆದಾಗ ಅಲ್ಲ. ಚಂದ್ರಳನ್ನು ಮೊದಲ ಬಾರಿಗೆ ಊರಿಗೆ ಕರೆದುಕೊಂಡು ಹೋದಾಗ ನಾನು ಮೊಟ್ಟ ಮೊದಲಿಗೆ ಕತೆಗಾರನಾದದ್ದು ಅಪ್ಪಯ್ಯನ ಬಗ್ಗೆ ಕತೆ ಬರೆಯುವ ಮುಖಾಂತರವೇ. ನನ್ನ ಸೃಷ್ಟಿಗೆ ಕಾರಣನಾದ ಅಪ್ಪಯ್ಯನ ಬಗ್ಗೆಯೇ ಬರೆದು ಅವನನ್ನೇ ನನ್ನ ಕಥಾವಸ್ತುವನ್ನಾಗಿ ಮಾಡಿಕೊಂಡಿದ್ದೆ. ಅಮ್ಮ ಕ್ಯಾನ್ಸರ್‌ನಿಂದ ಸತ್ತ ನಂತರ ಅಪ್ಪಯ್ಯ ಮಾನಸಿಕ ಸಮತೋಲನವನ್ನು ಕಳೆದುಕೊಂಡಿದ್ದ. ತನ್ನ ಅಪಮಾನವನ್ನು ನನ್ನ ಮತ್ತು ತಂಗಿ ಸುಮಾಳ ಏಳಿಗೆಯ ಮೂಲಕ ನೀಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಕಾಲೇಜಿನ ರಜೆಗೆಂದು ಊರಿಗೊಮ್ಮೆ ಹೋದಾಗ ಹಳೆಯ ಮಿತ್ರ ಜಗನ್ನಾಥ ಹೇಳಿದ್ದ "ಲಚುಮಿಯನ್ನು ನಿನ್ನಪ್ಪ ಇಟ್ಟುಕೊಂಡವನೆ" ಎಂದು. ಜಗನ್ನಾಥನ ಮಾತುಗಳನ್ನು ಬೇಗನೆ ತೆಗೆದು ಹಾಕುವಂತಿರಲಿಲ್ಲ. ಏಕೆಂದರೆ ಬಹುಶಃ ಈ ಜಗನ್ನಾಥನೇ ಚಿಕ್ಕಂದಿನಲ್ಲಿ ನನ್ನ ಆಲೋಚನೆಗಳಿಗೆ ಆಯಾಮವನ್ನು ಕೊಟ್ಟವನೆಂದು ಹೇಳಬೇಕು. ಜಯಮಂಗಲಿಯನ್ನು ದಾಟಿ ಪಕ್ಕದೂರಿಗೆ ಮಿಡಲ್ ಸ್ಕೂಲಿಗೆ ಹೋಗುವಾಗ ಜಗನ್ನಾಥನೇ ನನಗೆ ನಾಯಕ. ಶಾಲೆಯಲ್ಲಿ ಓದುವುದರಲ್ಲಿ ದಡ್ಡನಾದರೂ ಅವನು ಏನೆಲ್ಲ ವಿಷಯಗಳನ್ನು ತಿಳಿದುಕೊಂಡಿದ್ದ. ಕೆಲವೊಮ್ಮೆ ಅವನ ಹೋಮ್ ವರ್ಕನ್ನು ನಾನೇ ಬರೆಯಬೇಕಿತ್ತು. ಮನೆಯಲ್ಲಿ ಏನೇ ತಿಂಡಿಕೊಟ್ಟರೂ ಅವನಿಗೆ ಸಮವಾಗಿ ಹಂಚಿ ತಿನ್ನಬೇಕಿತ್ತು. ಅವನ ದೋಸ್ತಿಯಾಗಿದ್ದರಿಂದ ಅವನಷ್ಟೆ ನನ್ನನ್ನು ಕಂಡರೆ ಬೇರೆ ಹುಡುಗರೂ ಹೆದರುತ್ತಿದ್ದರು. ನನಗೆ ಅದೊಂದು ಖುಷಿ ಕೊಡುವ ವಿಷಯವಾಗಿತ್ತು. ಒಂದು ದಿನ ಜಗನ್ನಾಥ ಕೇಳಿದ್ದ: "ಮನುಷ್ಯ ಎಲ್ಲಿ ಹುಟ್ತಾನೆ ಗೊತ್ತಾ ನಿಂಗೆ?" ಎಂದು ನಾನು ತಟಕ್ಕನೆ "ಹೊಟ್ಟೆಯಲ್ಲಿ" ಎಂದು ಉತ್ತರಿಸಿದ್ದೆ. ಅವನು ಕಿಸಕ್ಕನೆ ನಕ್ಕಿದ್ದ "ಅಯ್ಯೊ ಪೆದ್ದನ ಮಗ್ನೆ ಅದೂ ಗೊತ್ತಿಲ್ವಾ ನಿಂಗೆ ನೀನೊಂದು ಪುಕ್ಕಲದ ಬದ್ನೆಕಾಯಿ" ಎಂದು ನನ್ನಲ್ಲಿ ಕುತೂಹಲವನ್ನು ಕೆರಳಿಸಿದ್ದ. ನನಗೂ ತಿಳಿಸುವಂತೆ ಅವನನ್ನು ಪೀಡಿಸಿದ್ದೆ. ರೊಟ್ಟಿ ಬೆಣ್ಣೆಯನ್ನು ತಂದು ಕೊಟ್ಟಿದ್ದೆ. ಅಂದು ಅವನು ನನ್ನನ್ನು ಊರ ಹಿಂದಿನ ಬೇಲಿಯ ಸಾಲಿಗೆ ಕರೆದುಕೊಂಡು ಹೋಗಿ ಮರೆಯಲ್ಲಿ ಕೂರಿಸಿ, ಅವನೂ ಪಕ್ಕದಲ್ಲಿ ಕುಳಿತಿದ್ದ ನನಗೆ ಗಲಾಟೆ ಮಾಡ ಕೂಡದೆಂದು ಸೂಚನೆ ಕೊಟ್ಟಿದ್ದರಿಂದ ನಾನು ಮೌನವಾಗಿ ಉಸಿರು ಬಿಗಿಹಿಡಿದು ಕುಳಿತಿದ್ದೆ. ಅಷ್ಟರಲ್ಲಿ ಮರಾಠಿಗರ ರಾಣೆಮ್ಮಜ್ಜಿ ಚೆಂಬು ಹಿಡಿದು ಬಂದು ಹೇಸಿಗೆ ಮಾಡಲು ಕುಳಿತಳು. ಅವಳ ಕಡೆ ಬೊಟ್ಟು ಮಾಡಿ ತೋರಿಸುತ್ತಾ ಜಗನ್ನಾಥ "ಅಗೋ ಅಲ್ಲಿ ಬಗ್ಗಿ ನೋಡು ಅದೇ ಮನುಷ್ಯ ಹುಟ್ಟುವ ಜಾಗ" ಎಂದ ನಮ್ಮ ಪಿಸುಮಾತು ಕೇಳಿ ರಾಣೆಮ್ಮಜ್ಜಿ "ಯಾವೋನ್ರಾ ನನಗಿಷ್ಟೆ ಬೇಲಿಯಾಗಿರೋನು" ಎಂದಾಗ ಇಬ್ಬರೂ ಎದ್ದು ಓಡಿದ್ದೆವು. ಅಂದು ರಾಣೆಮ್ಮಜ್ಜಿ ಅಪ್ಪಯ್ಯನಿಗೆ ವಿಷಯ ತಿಳಿಸಿದ್ದಳು. ಮೈ ಬಾಸುಂಡೆ ಬರುವಂತೆ ಅಪ್ಪಯ್ಯ ಬಾರುಗೋಲಿನಿಂದ ಬಾರಿಸಿದ್ದ ನಂತರ ನಾನು ಜಗನ್ನಾಥನ ಸಂಗವನ್ನೆ ಮಾಡಿರಲಿಲ್ಲ. ಅದ್ದರಿಂದ ಅಪ್ಪಯ್ಯನ ಬಗ್ಗೆ ಅವನೇಳಿದ ವಿಷಯವನ್ನು ನಂಬಲು ಬರುವಂತಿತ್ತು. ಆದರೆ ಖುದ್ದಾಗಿ ನೋಡಿ ನಂಬಬೇಕೆಂದು ತೀರ್ಮಾನಿಸಿದ್ದೆ. ಏಕೆಂದರೆ ಒಮ್ಮೆ ನಾನು ಊರಿಗೆ ಹೋದಾಗ ಕಬ್ಬಿನ ಗದ್ದೆಯಲ್ಲಿ ಲಚುಮಿಯೊಡನೆ ನಾನೂ ಸುಖಿಸಿದ್ದೆ ಅದು ನನಗೆ ಮತ್ತು ಲಚುಮಿಗೆ ಮಾತ್ರ ಗೊತ್ತಿತ್ತು. ಜಗನ್ನಾಥ ಹಾಗೆ ಹೇಳಿದ ದಿನದ ಸಂಜೆಯೇ ಹೊಲದ ಹತ್ತಿರ ಹೋದಾಗ ಎರಡು ಹುಲ್ಲಿನ ಬಣವೆಗಳ ಮಧ್ಯೆ ಅಪ್ಪಯ್ಯ ಮತ್ತು ಲಚುಮಿ ಒಬ್ಬರನ್ನೊಬ್ಬರು ತಬ್ಬಿ ಮಲಗಿದ್ದರು. ಜಗನ್ನಾಥ ನಿಜ ಹೇಳಿದ್ದ. ನನ್ನೊಡನೆ ಮಲಗಿದ್ದ ಲಚುಮಿ ಈಗ ಅಪ್ಪಯ್ಯನ ಸ್ವತ್ತು. ಇವರಿಬ್ಬರ ಸಂಬಂಧಗಳೊಂದಿಗೆ ನನ್ನನ್ನೂ ಸೇರಿಸಿಕೊಂಡು ಕತೆಯನ್ನು ಹೆಣೆದಿದ್ದೆ. ಅಪ್ಪಯ್ಯನೂ ಕತೆ ಓದಿದ್ದ. ಊರಿಗೆ ಹೋದಾಗ ಅಪ್ಪಯ್ಯ ಮೌನದಿಂದ ನಿರ್ಲಿಪ್ತನಾಗಿದ್ದ. ನನ್ನನ್ನೇನೂ ಪ್ರಶ್ನಿಸಲಿಲ್ಲ. ಅವನ ಮುಖ ಕಂಡು ಅಯ್ಯೊ ಎನ್ನಿಸಿತ್ತು. ಹಾಗೆಯೇ ಬಲು ದೂರದ ನೆನಪಿಗೆ ನನ್ನನ್ನು ಅವನ ಕೋಪದ ಮೌನ ಮುಖ ಒಯ್ದಿದ್ದುಂಟು. ಐದನೆಯ ತರಗತಿಯಲ್ಲಿ ಓದುತ್ತಿದ್ದಾಗೊಮ್ಮೆ ಶಾಲೆಗೆ ಹೋಗುವುದಿಲ್ಲವೆಂದು ಹಠ ಹೂಡಿದ್ದೆ. ಅಪ್ಪಯ್ಯ ಮತ್ತು ಅಮ್ಮ ಎಷ್ಟು ಒಳ್ಳೆಯ ಮಾತಿನಲ್ಲಿ ಹೇಳಿದ್ದರೂ ಕೇಳಿರಲಿಲ್ಲ. ನಂತರ ಅಪ್ಪಯ್ಯ ಬಾರುಗೋಲಿನಲ್ಲಿ ಶಾಲೆ ತಲುಪುವವರೆಗೂ ನನ್ನನ್ನು ಬಾರಿಸಿಕೊಂಡು ಬಂದಿದ್ದ. ಅಪ್ಪಯ್ಯನ ಉಗ್ರ ರೂಪವನ್ನು ನಾನಂದೇ ಮೊದಲ ಬಾರಿಗೆ ಕಂಡದ್ದು. ಅಂದು ರಾತ್ರಿ ಪ್ರೀತಿಯಿಂದ ಮಿಠಾಯಿಯನ್ನು ತಂದು ನನ್ನ ತಲೆ ನೇವರಿಸುತ್ತಾ "ನೀನು ಅಂಗೆಲ್ಲ ಹಠ ಮಾಡ್ಬಾರ್ದು ಮಗಾ. ನೀ, ಓದಿ ದೊಡ್ಡ ಡಾಕ್ಟರಾಗಬೇಕು" ಎಂದು ಮುದ್ದಿಸಿದ್ದ ನೆನಪು ಇನ್ನೂ ಹಚ್ಚ ಹಸುರಾಗಿಯೇ ಇದೆ. ಮತ್ತೆಂದೂ ನಾನು ಶಾಲೆಗೆ ತಪ್ಪಿಸಿಕೊಂಡಿರಲಿಲ್ಲ. ಅಂದು ನನ್ನ ಬಗ್ಗೆ ಅಪ್ಪಯ್ಯ ಆ ರೀತಿ ವರ್ತಿಸದೇ ಇರುತ್ತಿದ್ದಿದ್ದರೆ, ಅವನ ಬಗ್ಗೆ ಕತೆ ಬರೆಯುವಷ್ಟು ಸಾಮರ್ಥ್ಯ, ಜ್ಞಾನ ನನ್ನಲ್ಲಿ ಇರುತ್ತಿರಲಿಲ್ಲ. ಅಪನಂತಯೇ ಆ ಬರಡು ನೆಲದಲ್ಲಿ ಮಳೆ ಬಂದಾಗ ಹೊಲ ಉಳುತ್ತಾ ಇರಬೇಕಾಗುತ್ತಿತ್ತೊ. ಏನೋ "ಕ್ಷಮಿಸು ಅಪ್ಪಯ್ಯ ಹೀಗೆ ಬರೆದು ಬಿಟ್ಟೆ" ಎಂದಿದ್ದೆ. ಅಪ್ಪಯ್ಯ ಮೌನದಿಂದಿದ್ದರು. ತಂಗಿ ಸುಮಿಯ ಮುಖ ಕೂಡ ಸಪ್ಪಗಿತ್ತು. ಅಂದಿನಿಂದ ಲಚುಮಿಯ ಸಂಬಂಧವನ್ನು ಅಪ್ಪಯ್ಯ ಕಳೆದುಕೊಂಡಿದ್ದರು. ಆದರೆ ಅಪ್ಪಯ್ಯ ಮಾತ್ರ ಆಗಾಗ ನನ್ನ ಕತೆಗಳಲ್ಲಿ ಸುಳಿಯುತ್ತಲೇ ಇದ್ದರು.

ನನಗೆ ಸರಕಾರಿ ಕಾಲೇಜಿನಲ್ಲಿ ಲೆಕ್ಚರರ್ ಕೆಲಸ ಸಿಕ್ಕಿದಾಗ ಅಪ್ಪಯ್ಯ ಸಂತೋಷಗೊಂಡರೂ ಅಸಮಾಧಾನದಿಂದ ಇದ್ದ. ನಾನು ಡಾಕ್ಟರನೋ, ಇಂಜನಿಯರನೋ ಆಗಿದ್ದಿದ್ದರೆ ಅಪ್ಪಯ್ಯನಷ್ಟು ತೃಪ್ತಿ ಪಡುತ್ತಿದ್ದವರು ಬೇರ್‍ಯಾರು ಇರುತ್ತಿರಲಿಲ್ಲವೇನೋ. ಅಪ್ಪಯ್ಯನ ಅಷ್ಟಿಷ್ಟು ನೆಮ್ಮದಿಯನ್ನು ನಾನು ಬಹಳ ಬೇಗ ಹಾಳು ಮಾಡಿದ್ದೆ. ಚಂದ್ರಳನ್ನು ನಾನು ಪ್ರೀತಿಸತೊಡಗಿದ್ದೆ. ನನ್ನ ಮತ್ತು ಚಂದ್ರಾಳ ನಡುವೆ ಬೆಳೆದ ಸಂಬಂಧ ವಿಚಿತ್ರವೆಂದೇ ಹೇಳಬೇಕು. ಅವಳು ನನ್ನ ವಿದ್ಯಾರ್ಥಿನಿ. ನನ್ನ ಯಾವುದೇ ಕತೆ ಪತ್ರಿಕೆಗಳಲ್ಲಿ ಪ್ರಕಟವಾದಗಲೆಲ್ಲ ಅವಳು ತರಗತಿಯಲ್ಲಿ ಎದ್ದು ನಿಂತು ನನ್ನ ಕತೆಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದಳು. ಅವಳ ಅಭಿಮಾನಕ್ಕೆ ನಾನು ಸಂತೋಷಿಸುತ್ತಿದ್ದೆ. ಇಷ್ಟಕ್ಕೆ ನನ್ನ ಮತ್ತು ಅವಳ ಹೆಸರುಗಳು ಕಾಲೇಜಿನ ಗೋಡೆಗಳ ಮೇಲೆ ಮಿನುಗಿದ್ದವು. ನನಗೆ ಕಸಿವಿಸಿಯಾಯಿತು. ಅದಾದ ಒಂದು ವಾರದ ನಂತರ ಚಂದ್ರ ನನಗೊಂದು ಪತ್ರವನ್ನು ಬರೆದಿದ್ದಳು. ಅದರಲ್ಲಿ ಅವಳು ತನ್ನ ಮನದಳಲನ್ನು ತೋಡಿಕೊಂಡಿದ್ದಳು. ನೆಮ್ಮದಿಯಿಲ್ಲದ ಅವಳ ಬದುಕಿನ ಮಾನಸಿಕ ಯಾತನೆಗಳನ್ನು ತೆರೆದಿಟ್ಟಿದ್ದಳು. ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ಅವಳಲ್ಲಿದ್ದ ಭಾಷಾ ಪ್ರೌಢಿಮೆಗೆ, ಅವಳ ಗಾಢವಾದ ಆಲೋಚನೆಗಳಿಗೆ ನಾನು ಆಶ್ಚರ್ಯಪಟ್ಟಿದ್ದೆ. ತರಗತಿಯಲ್ಲಿ ಓದುವುದರಲ್ಲಿ ಎಲ್ಲರಿಗಿಂತಲೂ ಮೊದಲಾಗಿದ್ದ ಅವಳ ಪ್ರತಿಭೆಗೆ ನಾನು ಮೆಚ್ಚಿದ್ದೆ. ಕೊನೆಗೆ ಅನಿರೀಕ್ಷಿತವಾಗಿ ಅವಳಿಂದ ಪತ್ರ ಬಂದಿತ್ತು. ನನ್ನನ್ನು ಅತ್ಯಂತವಾಗಿ ಪ್ರೀತಿಸುತ್ತಿರುವುದಾಗಿಯೂ, ತನ್ನ ಹೃದಯದಲ್ಲಿ ನನಗೆ ಪೂರ್ತಿಯಾಗಿ ಸ್ಥಾನ ಕೊಟ್ಟಿರುವುದಾಗಿಯೂ ಬರೆದಿದ್ದಳು. ಅವಳ ಮುದ್ದು ಚೆಲ್ಲು ಮುಖದ, ಪುಟ್ಟ ಹೃದಯದ ಹಂಬಲವನ್ನು ಅರಿತು ನಾನು ಮಾನಸಿಕ ದ್ವಂದ್ವತೆಯಲ್ಲಿ ಸಿಲುಕಬೇಕಾಯಿತು. ನಾನು ಒಪ್ಪಿದರೆ ತನ್ನ ತಂದೆ ತಾಯಿ ಎಲ್ಲರನ್ನೂ ಬಿಟ್ಟು ಬರುವೆನೆಂದು ಬರೆದಿದ್ದಳು. ಪ್ರೀತಿಸುವ ಹೃದಯಗಳನ್ನು, ಜೀವನದ ಮೌಲ್ಯಗಳನ್ನು ಅರ್ಥಮಾಡಿಕೊಳ್ಳದ ಈ ಸಮಾಜದ ಬಗ್ಗೆ ಆಕ್ರೋಶವನ್ನು ವ್ಯಕ್ತಪಡಿಸಿದ್ದಳು. ನನಗೂ ಅವಳ ಮೇಲೆ ಅನುರಾಗ ಮೂಡಿತ್ತು. ನಂತರ ಅವಳ ಹುಚ್ಚು ಪ್ರೇಮ ಪತ್ರಗಳ ಮಹಾಪೂರವೇ ಹರಿಯಿತು ಎಂದು ಹೇಳಬೇಕು. ಸಂಪ್ರದಾಯಸ್ಥ ಅಪ್ಪಯ್ಯ ಒಮ್ಮೊಮ್ಮೆ ನೆನಪಿಗೆ ಬಂದು ಚಂದ್ರ ಒಂದು ದೊಡ್ಡ ಸಮಸ್ಯೆಯಾಗಿ ಬಿಡುತ್ತಿದ್ದಳು. ನನ್ನ ಈ ತಳಮಳವನ್ನು ಆತ್ಮೀಯ ಗೆಳೆಯರಾದ ವೆಂಕಟೇಶ್ ಹತ್ತಿರ ಪ್ರಸ್ತಾಪಿಸುತ್ತಿದ್ದೆ. ವೆಂಕಟೇಶ ಮಜಬೂತಾದ ಜೀವನವನ್ನು ನಡೆಸುತ್ತಿದ್ದ ಮನುಷ್ಯ. ನನ್ನ ಮಾನಸಿಕ ಹೊಯ್ದಾಟಗಳನ್ನು ಅವರು ಅಲ್ಲಗಳೆಯುತ್ತಿದ್ದರು. "ಸಾರ್, ನೀವು ತುಂಬಾ ಸೆಂಟಿಮೆಂಟಲ್ ಸಾರ್. ಆ ರೀತಿ ಇರ್ಬಾರ್ದು. ಬದುಕನ್ನು ನಾವು ಈಜಿಯಾಗಿ ತಗೋಬೇಕು. ಪ್ರೀತಿ, ಪ್ರೇಮ, ಸಂಬಂಧ ಇವುಗಳಿಗೆ ನಿರ್ದಿಷ್ಟ ವ್ಯಾಖ್ಯಾನ ಇದ್ದರೆ ಹೇಳಿ. ಈ ದಾದರ್‌ನ ಪ್ರತಿಯೊಂದು ಬೀದಿಗೂ, ಗಲ್ಲಿಗೂ ಇರುವ ಅರ್ಥವೇ ಈ ಬದುಕಿಗೆ ಇರುವುದು. ಬೀರ್‌ನ ನೊರೆಯಂತೆ ಹರಿದು ಚೆಲ್ಲುತ್ತದೆ. ಮೇಣದ ಬತ್ತಿಯಂತೆ ಉರಿದು ಸುರಿದೋಗುತ್ತದೆ. ಇರುವ ವರೆಗೂ ಸುಖಪಡಬೇಕು" ಎಂದು ಅದೆಷ್ಟೊ ಸಾರಿ ಟ್ರಾವೆಲ್ಸ್‌ನಲ್ಲಿ ನನಗೆ ಸಮಾಧಾನ ಹೇಳುತ್ತಿದ್ದರು. ಆದರೆ ಅವರ ಮಾತುಗಳು ಚಂದ್ರಳನ್ನು ನನ್ನ ಮನಸ್ಸಿನಿಂದ ಕಿತ್ತೊಗೆಯಲು ಅಸಮರ್ಥವಾಗಿದ್ದವು. ಚಂದ್ರಳಲ್ಲಿ ಅನುರಾಗ ಮೂಡುವುದಕ್ಕಿಂತ ಮುಂಚೆ ನಾನು ವೆಂಕಟೇಶ್ ಜತೆಯಲ್ಲಿ ದಾದರ್‌ನ ಕಾಮಟೀಯ ಹುಡುಗಿಯರೊಡನೆ ಮಲಗಿ ಸುಖಿಸಿದ್ದುಂಟು. ಆದರೆ ಚಂದ್ರಾಳ ಬಗ್ಗೆ ನಾನು ಯೋಚಿಸಲು ಶುರುಮಾಡಿದಾಗಿನಿಂದ ಆ ರೀತಿ ಮಾಡಲು ಮನಸ್ಸಾಗುತ್ತಿರಲಿಲ್ಲ. ಟ್ರಾವೆಲ್ಸ್‌ಗೆ ಬರುತ್ತಿದ್ದ ಜೋಡಿಗಳ ಸರಸ ಸಲ್ಲಾಪಗಳನ್ನು ಕಂಡು ಅವ್ಯಕ್ತ ಅದ್ವಂದ್ವತೆಗಳಲ್ಲಿ ನರಳುತ್ತಿದ್ದೆ. ಒಮ್ಮೆ ರಾತ್ರಿ ಒಂಭತ್ತು ಗಂಟೆಯಲ್ಲಿ ಟ್ರಾವಲ್ಸ್‌ನಲ್ಲಿ ಕುಳಿತಿದ್ದೆ. ಗೆಳೆಯ ಸೋಮಶೇಖರ್ ಸುಂದರ ಯುವತಿಯೊಬ್ಬಳನ್ನು ಕರೆತಂದರು. ನನ್ನನ್ನೂ ಬಲವಂತದಿಂದ 'ಫಿಶ್‌ಲ್ಯಾಂಡ್'ಗೆ ಕರೆದುಕೊಂಡು ಹೋದರು. ಅವಳನ್ನು ಅದೇಕೋ ಮುಟ್ಟಲಾಗಲಿಲ್ಲ. ನನ್ನ ಮನದಲ್ಲಿ ಚಂದ್ರಳ ತೇಲಿ ಬಂದಿದ್ದಳು. ನನ್ನನ್ನು ಅದೆಷ್ಟು ಗಾಢವಾಗಿ ಅವಳು ಪ್ರೀತಿಸುತ್ತಿದ್ದಳು. ಅಲ್ಲಿರಲು ಸಹ ನನಗೆ ಕಸಿವಿಸಿಯಾಯಿತು. 'ಫಿಶ್‌ಲ್ಯಾಂಡ್'ನ ಕೆಂಪು ದೀಪದ ಹಾಸಿಗೆಯ ಮೇಲೆ ನಗ್ನವಾಗಿದ್ದ ಆ ಯುವತಿ ನನ್ನ ವರ್ತನೆಗೆ ಅಟ್ಟಹಾಸದಿಂದ ನಗುತ್ತಿದ್ದಳು. "ಹೊಸಬರೆ...... ಅಥವಾ ಅವರು ಪುರುಷರಲ್ಲವೆ ಪಾಪ" ಎಂದು ನನ್ನನ್ನು ಕುರಿತು ಹೇಳಿದ್ದಳು. ಅವಳ ಈ ಮಾತುಗಳು ನನ್ನಲ್ಲಿ ಕ್ರೋಧವನ್ನುಂಟು ಮಾಡಿದ್ದವು. ಇದ್ದಕ್ಕಿದ್ದಂತೆ ನನ್ನ ಮನಸ್ಸಿನಿಂದ ಚಂದ್ರಳ ನೆನಪು ದೂರವಾಗಿ ಆಕ್ರಮಣಕ್ಕೆ ತೊಡಗಿದ್ದೆ. ಅವಳು ಸಾಕು ಎನ್ನುವ ವರೆಗೂ ಆಕ್ರಮಣ ನಡೆಸಿದ್ದೆ. "ಸಾರಿ ಸಾರ್ ನೀವು ಮೂಡಿ ಇರ್ಬೇಕು. ಇದ್ದಕ್ಕಿದ್ದಂತೆ ರೂಡ್ ಆಗಿ ಬಿಟ್ಟಿರಲ್ಲ." ಅವಳು ಬಿಸಿಯುಸಿರು ಬಿಡುತ್ತಾ ಹೇಳುತ್ತಿದ್ದಳು.

ಈ ವಿಷಯವನ್ನು ಚಂದ್ರಳ ಬಳಿ ಹೇಳಬೇಕೆನಿಸಿದ್ದರೂ ಹೇಳಲಿಲ್ಲ. ನನ್ನ ಭಾವನೆಗಳಿಗೆ, ಬದುಕಿಗೆ ಸ್ಪಂದಿಸುವ ಚಂದ್ರಳನ್ನು ನನ್ನ ಬಾಳ ಸಂಗಾತಿಯನ್ನಾಗಿ ಮಾಡಿಕೊಳ್ಳಲು ನಾನು ತೀರ್ಮಾನಿಸಿದೆ. ಅಂತೆಯೇ ಅಪ್ಪನಿಗೆ ತಿಳಿಸದಂತೆ ಅವಳನ್ನು ಮದುವೆಯಾಗಿದ್ದೆ. ಅವಳನ್ನು ಊರಿಗೆ ಕರೆದುಕೊಂಡು ಹೋಗಿ ಅಪ್ಪಯ್ಯನಿಗೆ ವಿಷಯವನ್ನು ತಿಳಿಸಬೇಕೆಂದು ತೀರ್ಮಾನಿಸಿದೆ. ಚಂದ್ರ ಭಯಗೊಂಡರೂ ನಾನು ಸಮಾಧಾನ ಹೇಳಿ ಮುನ್ನೂರು ಮೈಲಿಗಳಿಂದ ಅವಳನ್ನು ಬಯಲು ಸೀಮೆಯ ನನ್ನೂರಿಗೆ ಕರೆದುಕೊಂಡು ಬಂದಿದ್ದೆ. ಅಪ್ಪಯ್ಯ ಅಂದು ಬಹಳ ನಿಕೃಷ್ಟವಾಗಿ ವರ್ತಿಸಿದ್ದ. ಎರಡನೆಯ ಬಾರಿಗೆ ತನ್ನ ಉಗ್ರರೂಪವನ್ನು ತೋರಿಸಿದ್ದ. ಚಂದ್ರಳನ್ನು ಅಪ್ಪಯ್ಯ ಬಾಗಿಲಿನಲ್ಲಿಯೇ ತಡೆದಿದ್ದರು. "ಯಾವೋಳ ನೀನು ನನ್ನ ಮನೆಯಲ್ಲಿ ಕಾಲಿಡಬೇಡ. ಜಾತಿ ಕುಲ ಇಲ್ಲದೋಳು. ಒಬ್ಬ ಗಂಡಸಿನ ಹಿಂದೆ ಓಡಿ ಬರೋಕೆ ಮಾನ ಮರ್ಯಾದೆ ಇಲ್ಲವೆ..." ಎಂದು ಅನಾಗರೀಕನಾಗಿ ವರ್ತಿಸಿದ್ದರು. ಪರಿಪರಿಯಾಗಿ ಅಪ್ಪಯ್ಯನನ್ನು ಬೇಡಿಕೊಂಡರೂ ಪ್ರಯೋಜನವಾಗಲಿಲ್ಲ. "ನಿನ್ನದು ಅಂತ ಮನೆ ಇದ್ರೆ ಕರೆದು ಕೊಂಡು ಹೋಗು ಮಹಾಕ್ರಾಂತಿಕಾರಿ ನೀನು. ನನ್ನ ಮನೆಗೆ ಸೇರಿಸೊಲ್ಲ ನೀನು ಇವಳ್ನ ಕಟ್ಟಿಕೊಂಡದ್ದು ತಿಳಿದ ದಿನವೇ ಎಲ್ಲವನ್ನೂ ಸುಮಿಗೆ ಬರೆದು ಬಿಟ್ಟಿದ್ದೀನಿ ಅವಳೇ ಕಣೋ ನನ್ನ ಗಂಡು ಮಗು. ಕತೆಗಾರನಾಗಿ ನನ್ನನ್ನು ಉದ್ಧಾರ ಮಾಡ್ಬಿಟ್ಟೆ" ಎಂದು ನನ್ನ ಮುಖಕ್ಕೆ ಅಪ್ಪಳಿಸಿ ಹೇಳಿದ್ದರು. ಅಂದೇ ಚಂದ್ರಳೊಂದಿಗೆ ಹಿಂತಿರುಗಿದ್ದೆ. ಅವಳು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ವಿಧವಿಧವಾಗಿ ಸಮಾಧಾನ ಪಡಿಸಿದ್ದೆ. "ನಾನು ತುಂಬಾ ತಪ್ಪು ಮಾಡ್ಬಿಟ್ಟೆ ನಾವು ಈ ರೀತಿ ಮಾಡ್ಬಾರ್ದಾಗಿತ್ತು. ಈ ಸಮಾಜದಲ್ಲಿ ಪ್ರೀತಿ ಆದರ್ಶಗಳಿಗೆ ಬೆಲೆ ಇಲ್ಲ" ಚಂದ್ರ ಬಿಕ್ಕಳಿಸುತ್ತಲೇ ಹೇಳಿದ್ದಳು.

"ಅದು ನಿನ್ನ ಭ್ರಮೆ. ನಮಗೀಗ ಬದುಕು ಮುಖ್ಯ" ನಾನು ಹೇಳಿದ್ದೆ.

ಇದಾದ ಐದಾರು ದಿನಗಳಲ್ಲಿ ಒಂದು ದಿನ ಇನ್ನೊಂದು ಘಟನೆ ಅಪ್ಪಯ್ಯನನ್ನು ನೆನಪಿಗೆ ತರುವಂತೆ ಮಾಡಿತ್ತು. ಅಂದು ದಾದರ್‌ನಿಂದ ಬಾಂದ್ರಕ್ಕೆ ರೈಲಿನಲ್ಲಿ ಬರುತ್ತಿದ್ದೆ. ನನ್ನ ಪಕ್ಕದ ಸೀಟಿನಲ್ಲಿ ಕುಳಿತಿದ್ದ ಸರಿ ವಯಸ್ಸನ್ನು ಮೀರಿದ ವ್ಯಕ್ತಿಯೊಬ್ಬನ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಸುರಿಯುತ್ತಿತ್ತು.

"ಎಲ್ಲಿಯವರಾದಿರಿ ನೀವು ?" ಪ್ರಶ್ನಿಸಿದ್ದೆ.

"ಹುಬ್ಬಳ್ಳಿಯವರು"

ಏಕೊ ದುಃಖದಲ್ಲಿರುವಂತಿದೆ...? "

"ಏನು ಹೇಳಲಿ ಬಿಡಿ ಸ್ವಾಮಿ. ದಾದರ್‌ನಲ್ಲಿ ನನ್ನ ಮಗ ಬ್ಯಾಂಕಿನ ಮ್ಯಾನೇಜರ್ ಯಾವೋಳನ್ನೊ ನನ್ನ ಮಾತಿ

ಕೇಶವ ರೆಡ್ಡಿ ಹಂದ್ರಾಳ

ಲ್ಲದೆ ಕಟ್ಕೊಂಡವ್ನೆ ಹೋದ್ರೆ ಹೋಗ್ಲಿ ಚಿಂತಿಲ್ಲ. ಇಂದು ನನ್ನನ್ನು ಅವನೇ ಗುರುತು ಹಿಡಿಯಲಿಲ್ಲ. ಹರಿದ ಬಟ್ಟೆ ಉಟ್ಟುಕೊಂಡು ಹೊಟ್ಟೆ ಕಟ್ಟಿಕೊಂಡು ಅವನನ್ನು ಓದಿಸಿದೆ..." ಅವನಿಗೆ ಮುಂದೆ ಮಾತನಾಡಲಾಗಲಿಲ್ಲ. ನನಗೂ ಕೇಳಲಾಗುತ್ತಿರಲಿಲ್ಲ. ಕಣ್ಣೀರು ಒರೆಸಿಕೊಳ್ಳುತ್ತಿದ್ದ ಅದೇಕೋ ಆ ಕ್ಷಣ ನನ್ನ ಮನದಲ್ಲಿ ಅಪ್ಪಯ್ಯ ತೇಲಿ ಬಂದಿದ್ದ. ನನ್ನನ್ನು ಓದಿಸುವುದರಲ್ಲಿ ಅಪ್ಪಯ್ಯ ನೇನೂ ಕಡಿಮೆ ಆಸಕ್ತಿಯನ್ನು ತೋರಿಸಿದವನಲ್ಲ. ತನ್ನ ಎಷ್ಟೇ ಕಷ್ಟಗಳಿದ್ದರೂ ನನಗೆ ಹಣ ಕಳುಹಿಸುವುದರಲ್ಲಿ ವಿಳಂಬ ಮಾಡುತ್ತಿರಲಿಲ್ಲ. ಒಮ್ಮೆ ಕಾಸಿಗೆಂದು ಊರಿಗೆ ಹೋದಾಗ ಅಪ್ಪಯ್ಯ ಕಾಸಿಲ್ಲದೆ ಒದ್ದಾಡುತ್ತಿದ್ದ. ತಿನ್ನಲಿಕ್ಕೆ ಇಟ್ಟುಕೊಂಡಿದ್ದ ಭತ್ತವನ್ನೇ ಮಾರಿ ನನ್ನ ಕೈಯಲ್ಲಿ ಕಾಸಿರಿಸಿದ್ದ.

ಚಂದ್ರಾಳ ತೋಳ್ತೆಕ್ಕೆಯಲ್ಲಿ, ಅವಳ ಕಣ್ಣ ಭಾವದಲ್ಲಿ, ಚೆಲ್ಲು ಮುಖದಲ್ಲಿ ಅಪ್ಪಯ್ಯನನ್ನ ಮರೆಯಲು ಪ್ರಯತ್ನಿಸುತ್ತಿದ್ದೆ. ಊರಿನಿಂದ ಪತ್ರ ಬಂದಿರಲಿಲ್ಲ. ನಾನೂ ಕೂಡ ಪತ್ರ ಬರೆದಿರಲಿಲ್ಲ: ಏಳೆಂಟು ತಿಂಗಳ ಮೇಲೆ ಸುಮಿಯಿಂದ ಬಂದ ಪತ್ರ ನನ್ನನ್ನು ಕಂಗೆಡಿಸಿತ್ತು. ಸುಮಿ ಬರೆದಿದ್ದಳು. "ಅಪ್ಪಯ್ಯ ಈ ಇಪ್ಪತ್ತು ದಿನಗಳ ಹಿಂದೆ ತೀರಿ ಹೋದರು: ತನ್ನ ಸಾವಿನ ಸುದ್ದಿ ಕೂಡ ತಿಳಿಸಬಾರದೆಂದು ಅವರು ಬಯಸಿದ್ದರಿಂದ ನಿನಗೆ ತಿಳಿಸಲಿಲ್ಲ. ನೀನು ಹೋದ ನಂತರ ಅಪ್ಪಯ್ಯ ಹಾಸಿಗೆ ಹಿಡಿದ. ನಿನ್ನ ಬಗ್ಗೆ ಅಪ್ಪಯ್ಯ ಅದೆಷ್ಟು ಕನಸುಗಳನ್ನು ಹೆಣೆದಿದ್ದ ಗೊತ್ತೇನೋ ನನ್ನ ಹತ್ತಿರ ನಿನ್ನ ಭವಿಷ್ಯದ ಬಗ್ಗೆ ಹೇಳಿ ಖುಷಿಪಡುತ್ತಿದ್ದ. ಎಂತಹ ಕೆಲಸ ಮಾಡ್ಬಿಟ್ಟೆ ಕಣೋ ಊರಲ್ಲಿ ಎಲ್ಲರೂ ಅಪ್ಪಯ್ಯನ ಕಡೆ ಬೊಟ್ಟು ಮಾಡಿ ತೋರಿಸ್ತಿದ್ರು ಕೊರಗಿ ಕೊರಗಿ ಅಪ್ಪಯ್ಯ ಅಸುನೀಗಿಬಿಟ್ಟ. ಅವನ ನಿಟ್ಟುಸಿರು ನಿನಗೆ ತಗುಲಿಯೇ ತಗಲುತ್ತದೆ ಅಂತ ಶಾಪ ಹಾಕ್ತಿದ್ದ. ಆಸ್ತಿಪಾಸ್ತಿಯೆಲ್ಲ ನನ್ನೆಸರಿಗೆ ಮಾಡಿದ್ದ, ನನಗೇನೂ ಬೇಕಿಲ್ಲ. ಬಂದು ನೀನೆ ಎಲ್ಲವನ್ನೂ ವಶಪಡಿಸಿಕೊಳ್ಳಬಹುದು."

ಅಪ್ಪಯ್ಯನ ಸಾವಿನ ಸುದ್ದಿ ನಿಜವಾಗಿಯೂ ನನಗೆ ದುಃಖ ತಂದಿತ್ತು. ನನ್ನ ಅನೇಕ ಕತೆಗಳಲ್ಲಿ ಅಪ್ಪಯ್ಯನನ್ನು ದುರಂತವಾಗಿ ಚಿತ್ರಿಸಿದ್ದೆ. ಸಾಯಿಸಿದ್ದೆ. ಆಗೆಲ್ಲ ವಿಚಿತ್ರವಾದ ತೃಪ್ತಿ ಸಿಗುತ್ತಿತ್ತು.

ಸುಮಿಯ ಪತ್ರದಿಂದ ಚಂದ್ರ ನನಗಿಂತಲೂ ಹೆಚ್ಚು ದುಃಖಿಸಿದ್ದಳು. ವ್ಯಸನಿಯಾಗಿದ್ದಳು. ಅವಳ ಹೊಟ್ಟೆಯಲ್ಲಿ ಅಪ್ಪಯ್ಯನ ಹೆಸರು ಹೇಳುವ ಪಿಂಡ ಬೆಳೆಯುತ್ತಿತ್ತು. ಅಂದು ರಾತ್ರಿ ಊಟ ಮಾಡದೆ ಮಲಗಿದವಳು ವಿಪರೀತ ಕೆಮ್ಮ ತೊಡಗಿದಳು. ರಾತ್ರಿ ಒಂದೊತ್ತಿನಲ್ಲಿ ಚಂದ್ರಳ ಬಾಯಿಂದ ರಕ್ತ ಕಾರಿತು ಬೆಳಿಗ್ಗೆ ಡಾಕ್ಟರ್ ಪರೀಕ್ಷಿಸಿ ಹೇಳಿದ್ದರು "ಚಂದ್ರಳಿಗೆ ಬ್ಲಡ್ ಕ್ಯಾನ್ಸರ್ ತುಂಬಾ ಪ್ರಯತ್ನ ಪಟ್ಟರೆ ಮಾತ್ರ ಬದುಕಬಹುದು" ಎಂದು. ಒಮ್ಮೆಲೆ ಮೆರಿನ್ ಬೀಚಿನ ಅಲೆಗಳೆಲ್ಲ ನನ್ನ ಮೇಲೆ ಹಾರಿದ್ದವು. ಬೊಂಬಾಯಿಯ ರೈಲುಗಳೆಲ್ಲ ನನ್ನ ಮೇಲೆ ಹರಿದಾಡಿದ್ದವು. "ನಿಮ್ಮ ಬದುಕನ್ನು ಹಾಳು ಮಾಡಿ ಬಿಟ್ಟೆ ದಯವಿಟ್ಟು ಕ್ಷಮಿಸಿ ಬಿಡಿ. ನಾನೊಬ್ಬಳು ಹುಚ್ಚಿ. ಈ ಬದುಕೇ ಒಂದು ಕೆಟ್ಟ ಕನಸುಗಳ ಕಪ್ಪು ಸಮುದ್ರ. ನಿಮ್ಮನ್ನು ದಾರಿ ತಪ್ಪಿಸಿ ಬಿಟ್ಟೆ" ಎಂದು ಅವಳು ಪದೇ ಪದೇ ಕನವರಿಸುತ್ತಿದ್ದಳು. ನಾನೆಷ್ಟು ಸಮಾಧಾನ ಹೇಳಿದರೂ, ಸಂತೈಸಿದರೂ ಪ್ರಯೋಜನವಾಗಲಿಲ್ಲ. ಮುಂಬಯಿನ ಒಂದು ಸಂಜೆ ಚಂದ್ರಳನ್ನು ಆಹುತಿ ತೆಗೆದುಕೊಂಡಿತ್ತು.

ಈಗ ನಾನು ಒಬ್ಬಂಟಿಯಾಗಿ ಅರೆಹುಚ್ಚನಂತೆ ಬಾಂದ್ರದ ಈ ರಸ್ತೆಗಳಲ್ಲಿ ಅಲೆಯುತ್ತೇನೆ. ಬದುಕಿನ, ಸಂಬಂಧಗಳ ಅರ್ಥವನ್ನು ನಿರಂತರವಾಗಿ ಹುಡುಕುತ್ತಿದ್ದೇನೆ. ಬೀರ್‌ನ ನೊರೆಯಲ್ಲಿ ಅಪ್ಪಯ್ಯನನ್ನೂ... ದಾದರ್‌ನ ಕಾಮಟೀಯ ಹೆಂಗಸರ ತೋಳಿನಲ್ಲಿ ಚಂದ್ರಳನ್ನು ಮರೆಯಲು ಪ್ರಯತ್ನಿಸಿದಷ್ಟೂ, ಅವರು ಮತ್ತಷ್ಟು ನೆನಪಾಗಿ ಉಳಿಯುತ್ತಿದ್ದಾರೆ. ಟ್ರಾವಲ್ಸ್ ಗೆಳೆಯ ವೆಂಕಟೇಶ್ ಹೇಳುತ್ತಿದ್ದ "ಈ ದಾದರ್‌ನ ಪ್ರತಿಯೊಂದು ಬೀದಿಗೂ, ಗಲ್ಲಿಗೂ ಇರುವ ಅರ್ಥವೇ ಬದುಕಿಗೆ ಇರುವುದು... ಎನ್ನುವ ಮಾತುಗಳು ಪ್ರತಿಧ್ವನಿಯಾಗಿ ಅಪ್ಪಳಿಸುತ್ತವೆ. ಬೊಂಬಾಯಿಯ ಕಡಲಿನ ಅಲೆಗಳು, ರೈಲಿನ ಕೂಗುಗಳು, ಉದ್ದನೆಯ ರಸ್ತೆಗಳ ರಾತ್ರಿಯ ಕೆಂಪು ದೀಪಗಳು ನನ್ನನ್ನು ನಿತ್ಯವೂ ನುಂಗುತ್ತಿವೆ. ನುಂಗಿ ನುಂಗಿ ಕಕ್ಕುತ್ತಿವೆ. ●

ಉರಿಯುತಿದೆ ಗುಜರಾತ್

ಸಂಜೆ ಅಳುತಿದೆ ನೋಡು
ಬಂಜೆ ರಸ್ತೆಗಳ ಮೇಲೆ
ನೆರ– ಸತ್ತು
ಜಿದ್ದು ಕುದಿಯುವ ನಾಡಿನಲ್ಲಿ
ಮತ್ತೆ ಲೊಚಗುಟ್ಟಿತು ಹಲ್ಲಿ
ಒಂದು ಸುಂದರ ಸಂಜೆ–
ಹಕ್ಕಿಗಳ ಸಲಿವು, ನದಿಬೆಟ್ಟಗಳ ಸೆಳವು
ಮಂದಿಗಳ ಮನೆಗೆ ಮರಳುವ ಒಲವು–
ಎಲ್ಲ ದಿನಚರಿ ಮುಗಿಸಿದ
ಸೂರ್ಯ ಸಾಪನಪ್ಪಿದ ವೇಳೆ . . .
ಅಲ್ಲಿ
ಗಾಢ ಕತ್ತಲು ಹೆಪ್ಪುಗಟ್ಟಿತು
ಹೊಗೆ ಕವಿದು ದಟ್ಟ ಕಟ್ಟಿದಾಗ
ಬೆಂಕಿ ಹುಚ್ಚೆದ್ದು ಕುಣಿದಿತು.
ಮಗ್ಗಲು ಬದಲಾಯಿಸಬೇಕೆಂದಾಗ
ಕೈಕಾಲು ಕತ್ತರಿಸಿದ್ದು ನೆನಪಾಯ್ತು
ಮೂಲೆಯಲ್ಲಿ ಮುಲುಕಾಟ ಕೇಳಿದಾಗ
ಕಣಿಯ ಸೆರಗು ಜಾರಿಸಿದ್ದು ಅರಿವಾಯ್ತು..
ಸುಟ್ಟ ಗಳ, ಕಟಿಕಿ, ತೊಲೆಗಳು
ಚಟಪಟನೆ ಸಿಡಿವ ಸದ್ದು
ನೂರಾರು ಮನಸುಗಳ ಸುಟ್ಟು ಹಾಕಿದ ಜಿದ್ದು!

ಈಗ ರಹ್ಮತ್ ನಗರದಲ್ಲಿ–
ಎದ್ದು ಮುಳುಗುವ ಸೂರ್ಯ
ಕದ್ದು ಕಾಣುವ ಚಂದ್ರ,
ನರಿ- ಬದುಕು– ಸೀಳು–
ನಾಯಿಗಳ ಊಳು
ಹೊಗೆಯಾಡುತ್ತಿರುವ ನೆಲದ ತುಂಬಾ
ಮಾತು ಕಳಕೊಂಡವರ ಗೋಳು.
ಹುವರದಿರಿ ನನ್ನವರೆ,
ಒಡೆದ ಮನಸುಗಳ ಈ ದರಿದ್ರ ನಾಡಿನಲ್ಲಿ
ಹಡೆದ ತಾಯಿ ಹೆಸರಿಗೆ ಮಸಿ ಹಚ್ಚೋ ಕಾಡಿನಲ್ಲಿ
ಕೊಚ್ಚೆ ಗುಂಡಿಯ ಮುಚ್ಚಿ, ಸೆಗಣಿ ಹಚ್ಚಿ
ಬಣ್ಣದ ರಂಗವಲ್ಲಿ ಬಿಡಿಸ ಬನ್ನಿ
ಕಡಲ ಅಲೆಗಳ ನಡುವೆ ಮುತ್ತು ಹೊಳೆಯಬಹುದು
ಸಿಡಿಲು ಮಿಂಚಿನ ಬಳಿಕ
ವರ್ಷಧಾರೆಯ ಹರ್ಷ ಹರಿಯಬಹುದು
ಕೆಟ್ಟ ಕನಸುಗಳು ಹರಿದು ಬೆಳಕು ಕಾಣಲು ಬಹುದು
ಮತ್ತೆ ಮನಸುಗಳು ಬೆಸೆದು ಒಂದಾಗಬಹುದು
ಬಲಿತರ ಸೊಕ್ಕು ಮುರಿದು
ದಲಿತರ ಹಕ್ಕು ಮೆರೆಸೋಣ ಬನ್ನಿ.

—ಬಿ. ಎಂ. ಹನೀಫ್

ವಿಡಂಬನೆ–
ಆಧುನಿಕ ಮುದ್ದಣ–ಮನೋರಮೆ



ಮುದ್ದಣ–ಮನೋರಮೆಯರ ಸಲ್ಲಾಪ ಓದದವರಿರಲಿಕ್ಕಿಲ್ಲ. ಆ ಸಂದರ್ಭ ಮಳೆಗಾಲದ ಪ್ರಾರಂಭ. ಕಾಲ ಪುರುಷ ನಿಸ್ತೇಜನಾಗಿ ಜಡವಾಗಿದ್ದಾನೆ. ನವಿಲು ಸಂತೋಷದಿಂದ ಮೈಯುಬ್ಬಿ ಕುಣಿಯುತಿದೆ. ಜಾತಕವು ಬಾಯ್ಬಿಟ್ಟು ಮಳೆಹನಿಗೆ ಕಾಯ್ದಿದೆ. ಕೆಂಪೇರಿದ ಕಣ್ಣಿನ ಕೋಗಿಲೆಯು ಮಾವಿನ ಮರದ ಸೆಳೆಗೊಂಬೆಯಾಗಿ ಮೂಗನಂತಿದೆ. ಆದರೆ ನಮ್ಮ ಆಧುನಿಕ ಮುದ್ದಣ–ಮನೋರಮೆಯರ ಸಲ್ಲಾಪದ ಭಾಗ್ಯ ದೊರೆತದ್ದು ಒಂದು ಮಳೆಗಾಲದ ಪ್ರಾರಂಭ. ಮಳೆ ಬಂದಿಲ್ಲ. ಮಟ ಮಟ ಮಧ್ಯಾಹ್ನ. ಭೂಮಿ ಬಾಯ್ಬಿಟ್ಟಿದೆ. ಬಿಸಿಲಿನ ಝಳಕ್ಕೆ ಕಣ್ಣು ಕೆಂಪಾಗಿಸಿಕೊಂಡು, ಕೊಟ್ರಪ್ಪನ ಮನೆಗೆ ಪಯಣಿಸಿದ್ದೆ.

ನಾ ಕೊಟ್ರಪ್ಪನ ಮನೆಗೇಟ್ ಪ್ರವೇಶಿಸುವುದಕ್ಕೂ, ಕೊಟ್ರಪ್ಪನ ಮನದನ್ನೇ ಒಳಪ್ರವೇಶಿಸುವದಕ್ಕೂ ಸರಿಯಾಗಿತ್ತು. ಕೊಟ್ರಪ್ಪನ ಕೂಗುವುದಕ್ಕೆ ಮುಂಚೆ ಎದುರಿನ ಕಿಟಕಿಯಲಿ ದಿಟ್ಟಿಸಿದೆ. ಅಲ್ಲಿಯ ದೃಶ್ಯ ನೋಡಿ ನಿಬ್ಬೆರಗಾಗಿ ನಿಂತೆ. ಕೊಟ್ರಪ್ಪ ತನ್ನ ಪ್ರಾಣೇಶ್ವರಿಯ ಕಾಲು ಬುಡದಲ್ಲಿ ಪವಡಿಸಿದ್ದಾನೆ. ಆಕೆಗೆ ಕುಡಿಯಲಿಕ್ಕೆ "ತಣ್ಣೀರು" (ಐಸ್ ವಾಟರ್) ನೀಡಿ ಕಾಲೊತ್ತುತ್ತಾ ಉಪಚರಿಸುತ್ತಾ ಇದ್ದಾನೆ. ನಾ ಒಳಪ್ರವೇಶಿಸದೆ ಅಲ್ಲೇ ನಿಂತೆ.

"ರೀ......ಏನ್ರಿ... ಅಡಿಗೆ ಎಲ್ಲಾ ಆಯ್ತಾ... ಅಥ್ವಾ ಬರೀ ಉಪ್ಚಾರನಾ..." ಎಂದು ಗುಡುಗಿದಾಗ ಕೊಟ್ರಪ್ಪ ಪೆದ್ದು ಪೆದ್ದಾಗಿ ಆಕೆಯನ್ನು ನೋಡುತ್ತಾ ಕಾಲೊತ್ತುತ್ತಾಯಿದ್ದ. "ಏನ್ರಿ... ನಾ ಏಳಿದ್ದು ಕೇಳ್ಸಿಲ್ವಾ" ಎಂದಾಗ "ಕೇಳಲೇ... ಬಾಲೇ...., ಈ ಹಾಟ್ ಪ್ಲೇಟ್ ಎದ್ರುಗೆ ಹಾಟ್ ಆಗಿ, ವಿಸ್ಕಿ, ಗಿಸ್ಕಿ ನಡುವೆ ಮಿಕ್ಸಾಗಿ, ಸೂಫ್ ಸಾಂಬರ್ ಚಟ್ನಿಯ ನಡುವೆ ಚಟ್ನಿಯಾಗಿದ್ದೇನೆ ಪ್ರಿಯೇ... ಈಗ ಒಂದಷ್ಟು ಹೊತ್ತು ಅದೆಲ್ಲಾ ನೆಂಪಿಸದೆ... ಪ್ರಿಯಾಗಿ... ರಿಲಾಕ್ಸ್ ಆಗಿ... ಇರೋಣ ಪ್ರಿಯೇ" ಎಂದ ದೀನನಾಗಿ, ನಾಟಕೀಯವಾಗಿ. "ನಿಲ್ಸ್ರಿ... ನಿಮ್ಮ ನಾಟ್ಕ... ಎಲ್ಲಾ, ನಿವ್ ದೊಡ್ಡ ನಮ್ರಾ... ನಿಮ್ಮ ವಿಚಿತ್ರ ಅಂಗಿಕಾಭಿನಯ ಯಾನೆ ವಿಚಿತ್ರ ರೀತಿಯ ಕಣ್ಣು, ಬಾಯಿ ಆಡಿಸಿನೇ ಪ್ರೇಕ್ಷಕರಿಂದ ನಗಣೆ, ಕೊಳೆತ ಟೊಮೆಟೋ, ಮೊಟ್ಟೆ ಎಸ್ದಿದ್ದು ನೆಂಪ್ಪಿದೆ ಕಣ್ರಿ..." ಎಂದು ವಯ್ಯಾರವಾಗಿ ನಕ್ಕಾಗ "ಲೇ ಪೆಣ್ಮಣೀ... ನಿಂಗೇನೇ ಗೊತ್ತು, ನನ್ನಾ ಬೇಲೆಂಟು, ರಾಜಾಪಾರ್ಟ್‌ನಸರಿ ನನ್ನಾ ಅಂಗಿಕಾಭಿನಯ, ವಾಚಿಕಾಭಿನಯ, ಆಹಾರ್ಯಭಿನಯ, ಸಾತ್ವಿಕಾಭಿನಯ ನೋಡಿ ಮೂಕರಾಗ್ಬಿದ್ರು ಜನಾ...., ನಾ... ನಾಯ್ಕಿಯ ಜೊತೆ ಶೃಂಗಾರ ಸನ್ನಿವೇಶದ್ದಾಗೆ... ಬೊಂಬಾಟಾಗಿ ಶೃಂಗಾರ ಸನ್ನಿವೇಶ ಇಳಿಸ್ತಾಯಿದ್ದಾಗ... ಜನ ಶಿಲ್ಲು, ಚಪ್ಪಾಳೆ, ಕೇಕೆ ಗಗನ ಮುಟ್ತಾ ಇತ್ತು ಗೊತ್ತೇನೆ..."

"ಗೊತ್ತುಂಟ್ರೀ... ಸುಮ್ನಿರಿ. ನೀವು ಶೃಂಗಾರಕ್ಕೇ ಲಾಯಕ್ಕು ಇಡೀ ದಿನಾ ನನ್ನ ಸುತ್ತಾ ಸುತ್ತುತ್ತೀರಿ, ಮಂಗನಂಗೆ ಆಡ್ತೀರಿ, ಮೈ ಕೈ ಮುಟ್ತೀರಿ. ಅಂದ್ರಿಂದನೇ ಗೊತ್ತಾಗ್ತಿಲ್ವಾ... ನಮ್ಮ ಶೃಂಗಾರಾಭಿನಯ"

"ಎನ್ಮಾಡ್ಲಿ ಎನ್ನರಸೀ... ನೀವ್ ಮಹಿಳೆಯರು ಓರಾಟ ಮಾಡಿ ಗಂಡ್ಸಿಗೆ ಈ ಗತಿ ತಂದಿಟ್ರೀ...ನೀವ್ ಬಂಡಾಯ ಮಾಡಿ ಮನೆ ಕೆಲ್ಸಾ.. ಶಾಪಿಂಗ್ ಎಲ್ಲಾ ನಮ್ಗೇ ಹಚ್ಚಿಟ್ರೀ...ಮಕ್ಳ ಹೆರೋದನ್ನ ಬದ್ಲಾಯಿಸಕ್ಕಾಗಲ್ಲ"

ಸುಮ್ನಿರ್ರಿ ... ಇನ್ನೂ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಿಲ್ಲಾ, ಇನ್ನೂ ಅವ್ಕಾಸಗಳು ಸಿಗ್ತಾಯಿಲ್ಲ, ಇನ್ನೂ ಹೆಂಗ್ಸಿಗೆ ಪುರುಷ ದಬ್ಬಾಳಿಕೆಯಿಂದ ಪೂರ್ಣ ಮುಕ್ತಿ ಆಗಿಲ್ಲಾ.... ಇನ್ನೂ ಹೆಂಗ್ಸು ದಾಸಳಾಗಿ ತನ್ನ ಹೆಸ್ರು ಮುಂದೆ ಗಂಡನ ಹೆಸ್ರು ಹಾಕ್ಕೊಂಡವ್ರೆ..., ಇನ್ನೂ ವರದಕ್ಷಿಣೆ, ಸಾವು, ಮಾನಭಂಗ ಆಗ್ತಾನೆ... ಅವೆ." ಎಂದು ಭಾಷಣಾನೇ ಬಿಗಿದಾಗ, ಕೊಟ್ರಪ್ಪ ಕಣ್ಣು, ಬಾಯಿ ಬಿಟ್ಕೊಂಡು ನೋಡ್ತಾ ಕಾಲೊತ್ತುತ್ತಾಯಿದ್ದ.

"ಏನ್ರಿ...ಹಾಗೆ ತಿನ್ನೋ...ತರಹ ನೋಡ್ತೀರಿ..." ಎಂದಾಗ "ಲೇ... ರಮಣೀ... ನಿನ್ನಾ ನೋಡ್ತಾ... ನೋಡ್ತಾ... ಮುದ್ದಣನ ಮಾತ ಜಪ್ತಿಗೆ ಬರ್‍ತೈತೆ ಕಣೇ...". ಎಂದು ಗಂಟಲು ಸರಿಪಡಿಸಿಕೊಂಡು "ಅತೆ ದೊಗಲ ಪೂಗಣ್ಣ ಪೆಣ್ಣೆ, ಸಸಿಮೊಗದ, ಕಿಸುವಾಯ, ಪುಸಿನಡುವಿನ ರಸಿ, ಮಿಡಿ ಮೊಲೆಯ, ಪಿಡಿ ನಡೆಯ, ಬಿಡು ಜಡೆಯ ಸೀರೆ" ಎಂದು ಪ್ರಲಾಪಿಸಿದ. ಆಕೆ ಮುಖ ಕೆಂಪಾಗಿಸಿಕೊಂಡು "ಸುಮ್ನಿರ್ರಿ...ಗಂಡ್ಸ್ರೀಗೇ... ಇದೊಂದು ಅಸ್ತ್ರ. ಹೆಂಗ್ಸ್ರನ್ನು ಹೊಗಳೋದು, ಬುಟ್ಟಿಗೆ ಹಾಕ್ಸೋದು, ಮಕ್ಳ ಹೆಡೆಯೋ ಯಂತ್ರ ಮಾಡೋದು" ಎಂದು ಬೊಬ್ಬಿಟ್ಟು ಕಾಲನ್ನು ಝಾಡಿಸಿದಾಗ, ಕೊಟ್ರಪ್ಪ ಸೋಫಾದಿಂದ ಕೆಳಕ್ಕುರುಳಿದ. ಇದನ್ನೆಲ್ಲಾ ನೋಡ್ತಾಯಿದ್ದ ನನಗೆ ಯಾರೋ ತಲೆಗೆ ಸುತ್ತಿಗೆಯಿಂದ ಬಾರಿಸಿದಂತಾಗಿ, ಸಾವರಿಸಿಕೊಂಡು ಒಳಹೊಕ್ಕೆ. ನನ್ನ ನೋಡಿ ಇಬ್ಬರೂ ದಿಗ್ಭ್ರಾಂತನಾಗಿ ದೃಶ್ಯವೇ ಬದಲಾಯಿತು. "ಇವ್ರು...... ಹೀಗೇ...... ಕಣ್ರೀ...... ನಂಗೆ ಕೆಲ್ಸಾ...... ಮಾಡ್ಲಿಕ್ಕೇ...... ಬಿಡೋಲ್ಲಾ...... ತಾವೇ...... ಮಾಡ್ತಾರೆ" ಎಂದಾಗ ಕೊಟ್ರಪ್ಪ ಪಕ್ಕದಲ್ಲಿದ್ದ ಸೌಟನ್ನು ದೂರಕ್ಕೆಸೆದ. ನಾನು ಎಲ್ಲವನ್ನೂ ಅರಿತ ವಿಶ್ವ ರೂಪಿಯಂತೆ ದಿವ್ಯ ನಗೆ ನಕ್ಕು, ಸೋಫಾದಲ್ಲಿ ಪವಡಿಸಿದೆ.

—ವಿ. ಬಾಲಕೃಷ್ಣ ಶಿರ್ವ

ಇಂದಿನ ವಿದ್ಯಾರ್ಥಿ



ಅವ್ವನ ಕಾಮನೆಯ ವೃತ್ತದ ಹುತ್ತದಲಿ
ನೋಟ್ಸು ಬಿಟ್ಟು ಪುಟ ಪುಟದಲಿ
ರಾಕೆಟು ಜುಟ್ಟು ಕಟ್ಟಿ
ಶೃಂಗಾರ ಲಹರಿಯ ಪದ ತುಂಬಿ,
ಹೊಗೆ ಕಾರುತ್ತಾ ನಗೆ ಬೀರುತ್ತಾ,
ಡೆಸ್ಕು ಬೆಂಚುಗಳ ಬರುಕು ಕಂಪಿಸಿ,
ಅಭಾವ ನಭ ಮುಗಿಲಕ್ಕೇರಿ–
ಕೆಳಗೆ ಹಾರಿ ಜಡೆ ಚುಚ್ಚಿ ಮೈ ಮುಟ್ಟಿದಾಗ
ಗಗನ ಯಾತ್ರಿ ಯಾನ . . . !!
ಪ್ರಶ್ನೆಗಳು ಮೈತಡವಿದಾಗ ನಿರುತ್ತರ,
ಡೆಸ್ಕಿಗೆ ಮುದ್ರೆ ಒತ್ತಿ ಅಜ್ಞಾತನಾದ
ಸುಣ್ಣ ಕಾಣದ ಕಾಲೇಜಿನ ಗೋಡೆ ಸುಣ
ಉಳಿಸದೆ ಬಣ್ಣ ಬರೆಸುತಿದೆ.
ಬಸ್ಸು ನಿಲ್ದಾಣಗಳು ಆಯುಷ್ಯ ಕಳೆಯುತಿದೆ.
ಹೆಸರಾಸೆ ಹಿಗ್ಗಿ ಗುಣದಾಸೆ ಕುಗ್ಗಿ
ಚುನಾವಣೆಯ ಕಾವು ಏರುತಾ
ಚಾಕು ಚೂರಿಗಳ ನಿತ್ಯೋತ್ಸವ.
ಫ್ಯಾಶನ್ ಬೆನ್ನು ಹತ್ತಿ ಅರಿವೆ ಪರಿವೆ
ತಲೆ ಏರಿ ಮತ್ತೇರಿರಲು ಕಂಗಾಲು
ಸಿನಿಮಾ ನಂಟಾಗಿ ಕಗ್ಗಂಟಾಗಿದೆ.
ಹೋಟೆಲು ಬಾರುಗಳ ದರ್ಬಾರು
ಸರ್ವಋತು ಉದ್ಯಾನವಾಗಿ
ಬಾಹು ಬಲಿಯಂತೆ ನಿಲ್ಲಲಾಗದೆ ಕಂಗಳು
ಭಾರವಾಗುತಿದೆ
ಮೈ ಮನಗಳ ಭಾರ ಕಳೆದು
ಬೆಲೂನ್‌ಗಳಾಗಿ ಭುಜಪರುವ 'ಲವ್'
ಜಡೆ ಏರಿದ ಹೂ ಮರ ಬಳ್ಳಿಗಳ
ಪುಷ್ಪ ಗುಚ್ಛದಲ್ಲೊಂದು ಮೊಗ್ಗು ಹಿಗ್ಗಿ -
ಮಂದಾರ ಗಂಧ ಸೂಸಿ
ನಸುಕಿನ ಮಂದಹಾಸ ಬೀರಲು ತಡ
ಸುದಿನಗಳ ಸಾಲಲ್ಲಿ
ದುರ್ದಿನವಾಗಿ ಬರಲಿದೆ ಪರೀಕ್ಷೆ.
ನೂ ನಲವತ್ತಾರ ಕಟ್ಟಿ
ನಿತ್ಯೋತ್ಸವದ ಹಾಡಿನಲಿ ಮೈ ಮರೆತು
ಹಿತ ನುಡಿಗಳು ಯೋಗ ಸಾಧನೆ ಆಗಲಿದೆ.
ಇಂದಿನ ವಿದ್ಯಾರ್ಥಿ?

— ಅಬೂಬಕ್ಕರ್ ಉಚ್ಚಿಲ



ಒಂದು ದಿನ ವಿಜಯ ನಗರದ ಚಕ್ರವರ್ತಿ ಕೃಷ್ಣ ದೇವರಾಯನಿಗೆ ತೆನಾಲಿ ರಾಮಕೃಷ್ಣನ ಜಾಣ್ಮೆಯನ್ನು ಪರೀಕ್ಷಿಸ ಬೇಕೆಂದು ಮನಸ್ಸಾಯ್ತು. ರಾಮಕೃಷ್ಣನು ಮಾಡದ ತಪ್ಪೊಂದನ್ನು ಎತ್ತಿ ಹಿಡಿದು, ಕೋಪ ತೋರಿಸಿ 'ನಿನ್ನ ತಲೆಯನ್ನು ನಾಳೆ ಆನೆಯಿಂದ ತುಳಿಸಲಾಗುವುದು' ಎಂದು ಅಪ್ಪಣೆ ಕೊಡಿಸಿದನು. ರಾಮಕೃಷ್ಣನು ಏನೂ ಮಾತನಾಡದೆ ಸುಮ್ಮನಾದನು. ರಾಜನ ಆಜ್ಞೆಯಂತೆ ಬಯಲಿನಲ್ಲಿ ಒಂದು ಹೊಂಡ ತೋಡಿ ಅದರಲ್ಲಿ ರಾಮ ಕೃಷ್ಣನನ್ನು ನಿಲ್ಲಿಸಿ ಅವನ ಕುತ್ತಿಗೆಯ ತನಕ ಮಣ್ಣು ಮುಚ್ಚಲಾಯಿತು. ಮರುದಿನ ಹನ್ನೊಂದು ಗಂಟೆಗೆ ಆತನ ತಲೆಯನ್ನು ಆನೆಯಿಂದ ತುಳಿಸಲು ತೀರ್ಮಾನಿಸ ಲಾಯಿತು. ರಾತ್ರಿ ಇಡಿ ರಾಮಕೃಷ್ಣ ಈ ಸಂಕಷ್ಟದಿಂದ ಹೇಗೆ ಪಾರಾಗಲಿ ಎಂದು ಯೋಚಿಸುತ್ತಾ ಇದ್ದ.

ಬೆಳಕು ಹರಿವ ಹೊತ್ತು ಅರಮನೆಯ ಅಗಸ ಬಟ್ಟೆಗಳ ಗಂಟು ಹೊತ್ತುಕೊಂಡು ಹೋಗುತ್ತಿದ್ದವ ರಾಮ ಕೃಷ್ಣನ ಅವಸ್ಥೆ ಕಂಡು ದಂಗಾದನು. 'ಇದೇನು ಹೀಗೆ?' ಎಂದು ಪ್ರಶ್ನಿಸಿದನು.

'ತಾನು ಸೊಂಟ ನೋವಿನಿಂದ ನರಳುತ್ತಿದ್ದುದರಿಂದ ನೋವು ಮಾಯವಾಗಲು ಇದು ಮದ್ದು' ಎಂದನು ರಾಮಕೃಷ್ಣ. ಮಹಾರಾಜರ ಪ್ರಮುಖ ವೈದ್ಯನೇ ಈ ಸಲಹೆ ಮಾಡಿರುವುದಾಗಿಯೂ ರಾಮಕೃಷ್ಣ ಬುರುಡೆ ಬಿಟ್ಟ. ನೀನು ಕೂಡಾ ಇದೇ ರೀತಿ ಆರು ಗಂಟೆಗಳ ಕಾಲ ನಿಂತರೆ ನಿನ್ನ ಗೂನು ಬೆನ್ನು ಮಾಯವಾಗಿ, ನೋವು ಎಲ್ಲಾ ಹೊರಟು ಹೋಗಿ ಯೌವ್ವನ ಬರುತ್ತದೆ ಎಂದು ಅಗಸನನ್ನು ಪುಸಲಾಯಿಸಿದ.

ರಾಮಕೃಷ್ಣನ ಬೆಣ್ಣೆಯ ಮಾತುಗಳಿಗೆ ಕರಗಿದ ಅಗಸ ಮಣ್ಣು ಸರಿಸಿ ರಾಮಕೃಷ್ಣನನ್ನು ಮೇಲೆತ್ತಿದನು. ತಾನು ಹೊಂಡಕ್ಕೆ ಇಳಿದನು. ರಾಮಕೃಷ್ಣ ಅವನ ಸುತ್ತ ಮಣ್ಣು ತುಂಬಿ, ಅಗಸನ ಬಟ್ಟೆಯ ಗಂಟು ಹೊತ್ತುಕೊಂಡು ಅರಮನೆಗೆ ಹೊರಟನು.

ಹನ್ನೊಂದು ಗಂಟೆಯ ಹೊತ್ತಿಗೆ ಆನೆಯ ಸಮೇತ ಬಂದ ಭಟರು ಹಾಗೂ ಚಕ್ರವರ್ತಿ ಬೊಬ್ಬಿಡುತ್ತಿರುವ ಅಗಸನನ್ನು ಕಂಡು ಆಶ್ಚರ್ಯ ಚಕಿತರಾದರು. ಅಗಸನಿಂದ ನಡೆದ ವಿಚಾರ ಕೇಳಿ, ರಾಮಕೃಷ್ಣನ ಜಾಣ್ಮೆಗೆ ಬೆರಗಾದರು. ಕೃಷ್ಣ ದೇವರಾಯ ರಾಮಕೃಷ್ಣನನ್ನು ಸತ್ಕರಿಸಿದ ಎಂದು ಬೇರೆ ಹೇಳಬೇಕಾಗಿಲ್ಲ.

— ವಿ. ವೈ. ಬ್ಯಾರಿ ವಿಟ್ಲ

ಎಲ್ಲ ಕೆಡುಕುಗಳಿಗೆ ಮೂಲ-ಕುಡಿತ

ಮಕ್ಕಳೇ, ನಿಮಗೊಂದು ಚಿಕ್ಕ ಕಥೆ ಹೇಳುತ್ತೇನೆ. ಒಂದೂರಿನಲ್ಲಿ ಒಬ್ಬ ರಾಜಕುಮಾರನಿದ್ದನಂತೆ. ಸರಳಸಜ್ಜನಿಕೆಯ ಪ್ರಾಮಾಣಿಕ ವ್ಯಕ್ತಿ. ಹಿರಿಯರಲ್ಲಿ, ಗುರುಗಳಲ್ಲಿ, ಬಂಧುಗಳಲ್ಲಿ ತುಂಬಾ ಗೌರವವಿತ್ತು. ದೇವರಲ್ಲಿ ಭಕ್ತಿಯಿತ್ತು. ಒಂದು ದಿನ ರಾಜಕುಮಾರ ಊರು ತಿರುಗಲೆಂದು ಹೊರಟನು. ದಾರಿಯಲ್ಲಿ ಒಬ್ಬ ಸೈತಾನ ಎದುರಾದನು. ಸೈತಾನನೆಂದರೆ ಇನ್ನೊಬ್ಬರ ಏಳಿಗೆಯನ್ನು ಸಹಿಸದ ದುಷ್ಟ ಶಕ್ತಿ ಎಂದಿಟ್ಟುಕೊಳ್ಳಿರಿ. ಆ ಸೈತಾನನು ರಾಜಕುಮಾರನನ್ನು ತಡೆದು ನಿಲ್ಲಿಸಿದ. "ಎಲೇ ರಾಜಕುಮಾರ, ನಾನು ನಿನಗೆ ಮೂರು ಆಜ್ಞೆಗಳನ್ನು ಕೊಡುತ್ತೇನೆ. ಅದರಂತೆ ನೀನು ಮಾಡಲೇ ಬೇಕು" ಎಂದು ಅಪ್ಪಣಿಸಿದ. ಆಗ ರಾಜಕುಮಾರ "ಏನು ನಿನ್ನ ಆಜ್ಞೆ ? ನೋಡೋಣ, ಹೇಳಿಬಿಡು" ಎಂದನು. ಇದೋ ನನ್ನ ಮೊದಲ ಆಜ್ಞೆ "ನೀನು ನಿನ್ನ ಇಷ್ಟ ದೇವರನ್ನು ಮನಬಂದಂತೆ ನಿಂದಿಸು" ದೇವರಲ್ಲಿ ಭಕ್ತಿ ಶ್ರದ್ಧೆಯನ್ನಿಟ್ಟಿರುವ ರಾಜಕುಮಾರ ಆ ಆಜ್ಞೆಯನ್ನು ಅದೆಂತು ಪಾಲಿಸಬಲ್ಲ ! "ಇಲ್ಲ ನನ್ನಿಂದ ಸಾಧ್ಯವಿಲ್ಲ" ಎಂದು ದೃಢವಾಗಿ ಹೇಳಿದ "ಹೋಗಲಿ ಬಿಡು ಇದೋ ನನ್ನ ಎರಡನೇ ಆಜ್ಞೆ–ನಿನ್ನ ಆತ್ಮೀಯ ಬಂಧುವಿನ ಕೊಲೆ ಮಾಡು" ಅಯ್ಯೋ ಹುಚ್ಚ ಆ ಕೆಲಸ ನನ್ನಿಂದ ಸಾಧ್ಯವಾಗದು. ನಿನ್ನ ಮೂರನೇ ಆಜ್ಞೆ ಏನು ? ಎಂದು ರಾಜಕುಮಾರ ಸ್ವಲ್ಪ ಅಸಮಾಧಾನ ದಿಂದಲೇ ಹೇಳಿದ. ಆಗ ಸೈತಾನ ತುಸು ಯೋಚಿಸಿ– "ಆಯ್ತು ರಾಜಕುಮಾರ, ನಿನ್ನ ನಿರ್ಧಾರ ಯೋಗ್ಯವಾಗಿದೆ. ಆಗಲಿ ಚಿಂತಿಲ್ಲ ಇದೋ ನನ್ನ ಮೂರನೇ ಆಜ್ಞೆ- ಇದನ್ನಾದರೂ ಪಾಲಿಸು. ಹೋಗು ಶರಾಬು ಕುಡಿ ಕೂಡಲೇ ರಾಜಕುಮಾರ – ಓಹೋ ! ಅಷ್ಟೇ ತಾನೆ ಇದೋ ಹೊರಟೆ" ಎಂದವನೇ ನೇರವಾಗಿ ಶರಾಬು ಅಂಗಡಿಗೆ ಹೋಗಿ ಬೇಕಾದಷ್ಟು ಶರಾಬು ಕುಡಿದನು. ಕುಡಿದು ಮನೆ ಕಡೆಗೆ ಹೊರಟ.

ದಾರಿಯಲ್ಲಿ ಒಂದು ದೇವಸ್ಥಾನದಲ್ಲಿ ಪೂಜೆ ಜರಗುತ್ತಿತ್ತು. ಕುಡಿದು ಅಮಲೇರಿದ ರಾಜಕುಮಾರ ಅಲ್ಲಿಗೆ ಹೋದನು. ದೇವರಿಗೂ ಪೂಜಾರಿಗೂ ಒಟ್ಟಿಗೆ ಬೈಗಳ ಸುರಿಮಳೆಗರೆದ. ರಾಜಕುಮಾರನ ಈ ಅಸಭ್ಯವರ್ತನೆ ಅಲ್ಲಿದ್ದವರನ್ನು ಅಚ್ಚರಿಗೊಳಿಸಿತು. ಅರಮನೆಗೆ ಸುದ್ದಿ ಮುಟ್ಟಿತು. ರಾಜಕುಮಾರನ ಆತ್ಮೀಯ ಬಂಧುವೊಬ್ಬ ಸಮಾಧಾನ ಪಡಿಸಲು ಮುಂದೆ ಬಂದನು. ಸಿಟ್ಟಿಗೆದ್ದ ರಾಜಕುಮಾರ ತನ್ನ ಕೈಯ ಕತ್ತಿಯಿಂದ ತನ್ನ ಬಂಧುವಿನ ತಲೆ ಕತ್ತರಿಸಿದನು. ಸೈತಾನ ದೂರದಲ್ಲಿ ನಿಂತು ರಾಜಕುಮಾರನನ್ನು ಗಮನಿಸುತ್ತಿದ್ದನು. ತನ್ನ ಮೊದಲ ಆಜ್ಞೆಗಳನ್ನು ತಿರಸ್ಕರಿಸಿದ ರಾಜಕುಮಾರ ಕುಡಿತದ ಅಮಲಿನಿಂದ ತನಗರಿವಿಲ್ಲದೆಯೇ ಅವೆರಡನ್ನೂ ಪೂರೈಸಿದ ರೀತಿಯನ್ನು ಕಂಡು ವಿಕಟನಗು ನಕ್ಕು ಎಲ್ಲೋ ಮಾಯವಾದ.

ಮಕ್ಕಳೇ, ಕಥೆ ಕೇಳಿದಿರಾ ? ಪಾಪ ರಾಜಕುಮಾರನ ಅವಸ್ಥೆ ಯಾರಿಗೂ ಒದಗದಿರಲಿ. ಕುಡಿತ ಒಂದು ಕೆಟ್ಟ ಚಟ. ಅದರಿಂದ ಆಗುವ ಅನರ್ಥಗಳು ಒಂದಲ್ಲ, ಹಲವಾರು. ಆದರೂ ಕೆಲವರು ಕುಡಿಯುತ್ತಾರಲ್ಲಾ ? ಹೌದು. ಒಮ್ಮೆ ಕುಡಿತದ ಚಟಕ್ಕೆ ಬಲಿಬಿದ್ದನೆಂದರೆ, ನಂತರ ಸುಲಭವಾಗಿ ಆ ಚಟ ಬಿಡಲು ಆಗುವುದಿಲ್ಲ. ಕುಡಿತದ ಚಟಕ್ಕೆ ಬಲಿ ಬಿದ್ದು ಅದರಿಂದ ಪಾರಾಗಲು ಒದ್ದಾಡುವುದಕ್ಕಿಂತ ಅದರ ಅಭ್ಯಾಸ ಮಾಡದೇ ಇರುವುದು ಒಳ್ಳೆಯದಲ್ಲವೇ?.

ಕುಡಿತ ಈಗ ನಾಗರೀಕ ಜನ ಜೀವನದ ಒಂದು ಅಂಗವಾಗಿದೆ. ಯಾರು ಮದ್ಯಪಾನವನ್ನು ವಿರೋಧಿಸುವರೋ ಅವರನ್ನು ಅನಾಗರಿಕರಂತೆ ಕಾಣಲಾಗುತ್ತದೆ. ದಿನ ದಿನಕ್ಕೆ ಕುಡುಕರ ಸಂಖ್ಯೆ ಹೆಚ್ಚುತ್ತಿದೆ. ಜನರು ಯಾಕಾಗಿ ಕುಡಿಯುತ್ತಾರೆ ? ಪ್ರಾರಂಭದಲ್ಲಿ ಸ್ನೇಹಿತರ ಜೊತೆಗೆ ಗಮ್ಮತ್ತಿಗಾಗಿ ಕುಡಿಯುತ್ತಾರೆ. ಮನಸ್ಸಿಗೆ ಬೇಸರ ಆದಾಗ ಬೇಸರ ಕಳೆಯಲು ಕುಡಿಯುತ್ತಾರೆ. ಏನಾದರೂ ವಿಶೇಷ ಲಾಭವಾದಾಗ ಸಂತೋಷಕ್ಕಾಗಿ ಕುಡಿಯುತ್ತಾರೆ. ಅಮಲು ಪದಾರ್ಥ ಸೇವನೆ ಮಾಡಿದಾಗ ಸಿಗುವ ತಾತ್ಕಾಲಿಕ ಸುಖವೆಂಬ ಭ್ರಮೆ ಮುಂದೆ ತನ್ನ ನಿಜವಾದ ಸುಖವನ್ನು ಶಾಶ್ವತವಾಗಿ ನಾಶ ಮಾಡುತ್ತದೆ ಎಂಬ ಅರಿವು ಅವರಿಗೆ ಹೊಳೆಯುವುದಿಲ್ಲ. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಈ ಚಟಕ್ಕೆ ಬಲಿಯಾಗುತ್ತಿರುವುದು ಒಂದು ಸಾಮಾನ್ಯ ದೃಶ್ಯ. ಹಳ್ಳಿಗಳಲ್ಲೂ ಈ ಪಿಡುಗು ಹಬ್ಬುತ್ತಿದೆ. ಇವರೆಲ್ಲ ಕುಡುಕರಾಗಲು ಯಾರು ಕಾರಣ ? ಅವರ ಮನೆಯ ಪರಿಸ್ಥಿತಿ, ಸುತ್ತ ಮುತ್ತಲಿನ ಸಾಮಾಜಿಕ ಪರಿಸ್ಥಿತಿ, ದುಷ್ಟ ಸ್ನೇಹಿತರ ಕೂಟ–ಒಟ್ಟಿನಲ್ಲಿ ಇಡೀ ಸಮಾಜವೇ ಇದರ ಹೊಣೆಗಾರಿಕೆಯನ್ನು ಹೊರಬೇಕಾಗುತ್ತದೆ.

ಸುಲಭದಲ್ಲಿ ಹಣ ಸಂಗ್ರಹಿಸಬೇಕಾದರೆ ಮದ್ಯದ ವ್ಯಾಪಾರ ಮಾಡಬೇಕು. ಹಣದ ರುಚಿ ಕಂಡ ಮನುಷ್ಯ ಹಣ ಸಂಗ್ರಹಿಸಲು ನ್ಯಾಯವಾದ ಮಾರ್ಗಬೇಕೆಂದು ಯೋಚಿಸುವುದಿಲ್ಲ. ಸಾವಿರಾರು ಜನರ ಪ್ರಾಣ, ಮಾನ, ಅಂತಸ್ತುಗಳು ಹಾಳಾದರೂ ತಾವು ಹಣವಂತರಾಗಬೇಕೆಂಬುದೇ ಅವರ ಸಿದ್ಧಾಂತ. ಗಲ್ಲಿ ಗಲ್ಲಿಗಳಲ್ಲಿ ಬಾರ್‌ಗಳನ್ನು ತೆರೆದು, ವಿವಿಧ ಜಾಹೀರಾತುಗಳಿಂದ ಕುಡಿಯದವರನ್ನು ಕುಡಿಯುವಂತೆ ಪ್ರೇರೇಪಿಸುತ್ತಾರೆ.

ಕುಡಿತ ಒಂದು ಸಾಮಾಜಿಕ ದುಶ್ಚಟ ಎಂದು ಎಲ್ಲರಿಗೂ ತಿಳಿದಿದೆ. ಆದರೆ ಇದರ ನಿವಾರಣೆಗೆ ಯಾಕೆ ಯಾರೂ ಚಿಂತಿಸುವುದಿಲ್ಲ. ಸಂಪೂರ್ಣ ಪಾನ ನಿರೋಧ ಶಾಸನವನ್ನೇಕೆ ಜಾರಿಗೆ ತರಬಾರದು ? ಸಾಮಾನ್ಯವಾಗಿ ಇದಕ್ಕೆ ಹೆಚ್ಚಿನವರು ಕೊಡುವ ಕಾರಣ–ಅದು ಸಾಧ್ಯವಿಲ್ಲ. ಸರಕಾರಕ್ಕೆ ಈ ಉದ್ಯಮದಿಂದ ಕೋಟಿಗಟ್ಟಲೆ ವರಮಾನವಿದೆ. ಪಾನನಿರೋಧ ಶಾಸನವನ್ನು ಜಾರಿಗೆ ತಂದರೆ ಈ ಕೊರತೆಯನ್ನು ತುಂಬುವುದು ಹೇಗೆ ? ಅಲ್ಲದೆ ಕಳ್ಳಭಟ್ಟಿಯ ಹಾವಳಿ ಹೆಚ್ಚಾಗುತ್ತದೆ. ಕಡಿಮೆ ಗುಣ ಮಟ್ಟದ ಶರಾಬನ್ನು ಕುಡಿದು ಜನರು ತಮ್ಮ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಾರೆ–ಎಂಬುದು ಅವರ ವಾದ. ಹಾಗಿದ್ದರೆ ಸಮಾಜದ ನೈತಿಕ ಅಧಃಪತನಕ್ಕೆ ಕಾರಣವಾದ ಸಾವಿರಾರು ಸಂಸಾರಗಳನ್ನು ನಿರ್ಗತಿಕರನ್ನಾಗಿ ಮಾಡಿ ಕೆಲವೇ ಧನಿಕರನ್ನು ಸೃಷ್ಟಿಸುವ ಶರಾಬು ನಮಗೆ ಬೇಕೇ? ಬಡವರ ಕಣ್ಣೀರಿನಿಂದ ತೊಯ್ದ ಹಣದಿಂದ ನಾವು ರಾಷ್ಟ್ರ ಕಟ್ಟಬೇಕೇ ? ಅಯ್ಯೋ ! ನಮ್ಮ ದುರ್ವಿಧಿಯೇ ! ಈಗ ಉತ್ತಮ ಗುಣಮಟ್ಟದ ಶರಾಬನ್ನು ಕುಡಿದು ಜನರು ಆರೋಗ್ಯಶಾಲಿಗಳಾಗಿರುವರಲ್ಲವೇ ? ಕುಡುಕ ಆರೋಗ್ಯಶಾಲಿಗಳಿಂದ ನಮ್ಮ ಹಳ್ಳಿಗಳ ಜನರು ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದಾರಲ್ಲವೇ ? ಇತ್ತೀಚೆಗೆ ಬಹಿರಂಗಗೊಂಡ ಗೂಢಚರ್ಯೆ ಜಾಲ ಪ್ರಕರಣದಲ್ಲಿ ತಿಳಿದು ಬಂದಂತೆ ಕೇವಲ ಕೆಲವು ಬಾಟಲಿ ವಿದೇಶಿ ಮದ್ಯಗಳಿಗಾಗಿ ನಮ್ಮ ಅಮೂಲ್ಯ ದಾಖಲೆಗಳನ್ನು ಶತ್ರುಗಳಿಗೆ ಹಸ್ತಾಂತರಿಸಿದ ವಿಚಾರ ವಿವೇಕಿಗಳನ್ನು ತಲ್ಲಣಗೊಳಿಸಿದೆ.

ಈ ಅನಾಹುತಗಳಿಗೆ ಪರಿಹಾರ ಒಂದೇ. ಸಂಪೂರ್ಣ ಪಾನ ನಿಷೇಧ ಜಾರಿಗೆ ಬರಬೇಕು. ಯಾವುದೇ ಒಂದು ರಾಜ್ಯದಲ್ಲಿ ಈ ಕಾಯ್ದೆ ಜಾರಿಗೆ ಬಂದರೆ ಫಲಕಾರಿಯಾಗದು. ರಾಜ್ಯಗಳ ಸಹಕಾರದೊಂದಿಗೆ ಈ ಬಗ್ಗೆ ಕೇಂದ್ರ ಸರಕಾರವೇ ಶಾಸನ ಮಾಡಬೇಕು. ಕುಡಿದು ಸಾರ್ವಜನಿಕ ಸ್ಥಳಗಳಲ್ಲಿ ಕಾಣಿಸಿಕೊಂಡವರಿಗೆ ಉಗ್ರ ದಂಡನೆ ವಿಧಿಸಬೇಕು. ಕಳ್ಳಭಟ್ಟಿಕೇಂದ್ರಗಳನ್ನು ನಿರ್ದಾಕ್ಷಿಣ್ಯವಾಗಿ ಮೆಟ್ಟಿ ಹಾಕಬೇಕು. ಇದಕ್ಕೆ ಪ್ರತ್ಯೇಕ ಸಿಬಂದಿಯ ಅವಶ್ಯಕತೆಯಿಲ್ಲ. ಸರಕಾರಕ್ಕೆ ಅಸಾಧ್ಯವೆಂಬುದು ಇಲ್ಲ. ಕಳ್ಳಭಟ್ಟಿ ಪ್ರೋತ್ಸಾಹಕರನ್ನು ಎರಡು ವರ್ಷಗಳ ಕಾಲ ವಿಚಾರಣೆಯಿಲ್ಲದೆ ಸ್ಥಾನ ಬದ್ಧತೆಯಲ್ಲಿರಿಸಬೇಕು. ಸರಕಾರದ ಈ ಎಲ್ಲಾ ಕಾರ್ಯಗಳಿಗೆ ಜನರ ಬೆಂಬಲ ಸಿಗಬೇಕು. ಅದಕ್ಕಾಗಿ ಕುಡಿತದ ದುಷ್ಪರಿಣಾಮಗಳ ಕುರಿತು ವ್ಯಾಪಕ ಪ್ರಚಾರ ನಡೆಸಬೇಕು.

ಕುಡಿತ ಗೌರವಾನ್ವಿತ ವ್ಯಕ್ತಿಗಳಿಗೆ ಹೇಳಿಸಿದ್ದಲ್ಲ. ಸಭ್ಯರು ಎಂದೂ ಕುಡಿಯುವುದಿಲ್ಲ. ಇತ್ಯಾದಿ ಪ್ರಚಾರ ಭರದಿಂದ ಸಾಗಬೇಕು. ಕುಟುಂಬ ಕಲ್ಯಾಣ ಕಾರ್ಯಕ್ರಮದ ಪ್ರಾರಂಭದಲ್ಲಿ ಹಲವಾರು ಟೀಕೆ ಕೇಳಿಬಂದವು. ಆದರೆ ಈಗ ಜನರು ಸ್ವಯಂ ಪ್ರೇರಣೆಯಿಂದ ಅದಕ್ಕೆ ಹೊಂದಿಕೊಂಡಿಲ್ಲವೇ? ಅಂತೆಯೇ ಪಾನ ನಿಷೇಧದ ವಿಚಾರಕ್ಕೆ ಪ್ರಾರಂಭದಲ್ಲಿ ವಿರೋಧ ಕಾಣಬಹುದು. ಸರಕಾರವೂ ಜನರಿಗೆ ಬೇಡವಾದ ಕಾಯ್ದೆ ತಂದಲ್ಲಿ ಚುನಾವಣೆಯಲ್ಲಿ ಬಹುಮತ ಕಳೆದುಕೊಳ್ಳಬಹುದೆಂಬ ಹೆದರಿಕೆಯಿಂದಿರಬಹುದು. ಅದಕ್ಕೆ ಜನರೇ ಸರಕಾರಕ್ಕೆ ಈ ಕಾಯ್ದೆ ಜಾರಿಗೆ ತರುವಂತೆ ಒತ್ತಾಯಿಸಬೇಕು. ವಿವಿಧ ಸಂಘ ಸಂಸ್ಥೆಗಳು ವ್ಯಾಪಕ ಪ್ರಚಾರದ ಮೂಲಕ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಬೇಕು. ಸಮಾಜ ಮತ್ತು ಸರಕಾರ ಜೊತೆಯಾಗಿ ಕಾರ್ಯ ನಿರ್ವಹಿಸಿದರೆ ಇದು ಅಸಾಧ್ಯವಾದುದ್ದೇನೂ ಅಲ್ಲ. ಒಟ್ಟಿನಲ್ಲಿ ಮನಸ್ಸು ಬೇಕು. ಈಗಾಗಲೇ ಕುಡಿತದ ಚಟಕ್ಕೆ ಬಲಿಯಾದವರನ್ನು ಸಂಪರ್ಕಿಸಿ ಅವರು ಆ ಚಟದಿಂದ ವಿಮುಖರಾಗುವಂತೆ ಹಲವಾರು ಸಂಘ ಸಂಸ್ಥೆಗಳು ಪ್ರಯತ್ನಿಸುತ್ತಿವೆ. ಆದರೆ ದಿನನಿತ್ಯ ತನ್ನ ಕಣ್ಣೆದುರೇ ಕುಡಿಯುವುದನ್ನು ನೋಡುತ್ತಿರುವಾಗ, ಮೊದಲೇ ದುರ್ಬಲ ಮನಸ್ಸಿನ ಆತ ಅದೆಂದು ಕುಡಿತವನ್ನು ಸುಲಭವಾಗಿ ಬಿಡಬಲ್ಲ! ನವ ಪೀಳಿಗೆ ಈ ಚಟಕ್ಕೆ ಬಲಿ ಬೀಳದಂತೆ ನಾವು ಮುಂಜಾಗ್ರತೆ ವಹಿಸಬೇಕಾಗಿದೆ.

ಮಕ್ಕಳ ತಂದೆ ತಾಯಂದಿರು ಈ ದಿಸೆಯಲ್ಲಿ ಹೆಚ್ಚು ಮುತುವರ್ಜಿಯನ್ನು ವಹಿಸಬೇಕಾಗಿದೆ. ತಾವು ಕುಡಿಯದೆ ಕುಡಿತವನ್ನು ಆಗಾಗ ವಿರೋಧಿಸಿ ಎಚ್ಚರ ನೀಡಿ, ಚಿಕ್ಕಂದಿನಿಂದಲೇ ಅವರಲ್ಲಿ " ಕುಡಿತ ಕೆಟ್ಟದ್ದು " ಎನ್ನುವ ಅಭಿಪ್ರಾಯವನ್ನು ಮೂಡಿಸಬೇಕು. ಕುಡಿತದಿಂದ ನಿಮ್ಮ ಆರೋಗ್ಯ ಸುಧಾರಿಸುತ್ತದೆ ಎಂದು ಯಾವ ವೈದ್ಯರೂ ಹೇಳಿದ್ದಿಲ್ಲ, ಹಾಗಿರುವಾಗ ಕುಡಿತದ ಕೈಗೊಂಬೆ ಯಾಗಿ ನಮ್ಮನ್ನು ಮಾರಿಕೊಳ್ಳುವ ಪರಿಸ್ಥಿತಿಗೆ ನಾವೇಕೆ ಹೋಗಬೇಕು ? ಕುಡಿತದ ಅಭ್ಯಾಸದಿಂದ "ನಾಗರಿಕತೆ" ಬರುವುದಿಲ್ಲ. ಸುಸಂಸ್ಕೃತನಾಗುವುದಿಲ್ಲ. ಬದಲು ಚಿತ್ತಸ್ವಾಸ್ಥ್ಯ ಕೆಟ್ಟು ಕುಟುಂಬದ ಮನೆಯ ಹಿತಕರ ವಾತಾವರಣ ಕಲುಷಿತವಾಗುತ್ತದೆ. ಪರಸ್ಪರ ಪ್ರೀತಿ ಪ್ರೇಮ, ಸೌಹಾರ್ದ ಮೂಡುವಲ್ಲಿ ದ್ವೇಷ, ಅಸೂಯೆ ಬೆಳೆಯುತ್ತದೆ. ಸಮಾಜ ಕುಟುಂಬ ತುಂಡು ತುಂಡಾಗಿ ಆಪತ್ಕಾಲದಲ್ಲಿ "ಅಯ್ಯೋ" ಎನ್ನುವ ಪರಿಸ್ಥಿತಿಯೂ ಬರಬಹುದು ಇದು ನಮಗೆ ಬೇಕೇ ?

ಒಳ್ಳೆಯ ಹಾಲು ಹಣ್ಣು, ತರಕಾರಿ, ಎಳನೀರು, ಪಾನಕ- ಇತ್ಯಾದಿ ಇತ್ಯಾದಿಗಳು ನಮ್ಮಲ್ಲಿರುವಾಗ ಆ ಕೆಂಪು ದೀಪ ಮಾತ್ರ ನಮ್ಮನ್ನು ಆಕರ್ಷಿಸುತ್ತದೆ ಎಂದರೆ ಪ್ರಾಯಶಃ ನಾವು ಅವನತಿಯತ್ತ ಸಾಗುತ್ತಿದ್ದೇವೆ-ಎಂದು ಅರ್ಥವಲ್ಲವೇ? ಇನ್ನಾದರೂ ನಾವು ಚೆನ್ನಾಗಿ ಬದುಕೋಣ. ನಮ್ಮ ಬದುಕು ಇನ್ನೊಬ್ಬರಿಗೆ ಸಹ್ಯವಾಗಲಿ ಎಂದು ಹಾರೈಸೋಣ.

— ವಿಠಲ ಭಂಡಾರಿ ಕುಳಾಯಿ

ನಿಮಗೆ ಗೊತ್ತೇ?

ದೇಶ— ಚಲಾವಣೆಯಲ್ಲಿರುವ ನಾಣ್ಯಗಳು

ಆಸ್ಟ್ರೇಲಿಯಾ—ಡಾಲರ್
ಅಮೇರಿಕಾ—ಡಾಲರ್
ಬಾಂಗ್ಲಾದೇಶ—ಟಾಕಾ
ಬೆಲ್ಜಿಯಂ—ಫ್ರಾಂಕ್
ಬ್ರಿಟನ್—ಪೌಂಡ್
ಕೆನಡಾ—ಡಾಲರ್
ಶ್ರೀಲಂಕಾ—ರೂಪಾಯಿ
ಚೀನಾ—ಯಾ
ಫ್ರಾನ್ಸ್—ಫ್ರಾಂಕ್
ಇಂಡೋನೇಷಿಯಾ—ರೂಪೈಯಾ
ಇರಾಕ್—ದೀನಾರ್
ಇಟಲಿ—ಲಿರಾ
ಜಪಾನ್—ಯೆನ್
ಮೆಕ್ಸಿಕೋ—ಪಿಸೋ
ನೆದರ್‌ಲ್ಯಾಂಡ್—ಗಿಲ್ಡರ್
ಪಾಕಿಸ್ತಾನ—ರೂಪಾಯಿ
ಸ್ಪೆಯಿನ್—ಪಿಸ್ತಾ
ಇರಾನ್—ರಿಯಲ್
ಯುಗೋಸ್ಲೋವಿಯಾ—ದೀನಾರ್
ರಷ್ಯಾ—ರೂಬೆಲ್

(ಸಂಗ್ರಹ)

—ಆಶಾಲತಾ ಬಾಳಿಗಾ ಉಡುಪಿ

ಲೇ, ನೀನು ಶಾಲೆಯಲ್ಲಿ ಸೊನ್ನೆ ಬಾರಿಸೋದು ಬಿಟ್ಟು ಆಯಿತು. ಹೋಗು ಕ್ರಿಕೆಟ್‌ನಲ್ಲಾದ್ರೂ ನಾಲು ಸೆಂಚುರಿ ಬಾರಿಸು.

ಅನಿಸಿಕೆ

ಸಂತಸ

ಪ್ರಿಯರೆ,

ಮಕ್ಕಳ ಶಾಲೆ ವಿಭಾಗದಲ್ಲಿ ಬರೆಯುತ್ತಿರುವ ಪ್ರಬುದ್ಧ ಲೇಖಕ ಭವಾನಿಶಂಕರ್ ಶಿರ್ವರವರು ತಮ್ಮ ಹೊಸ ಹೊಸ ವಿಚಾರಧಾರೆಗಳಿಂದ ಓದುಗರ ದಾಹವನ್ನು ತಣಿಸುತ್ತಿರುವುದು ಸಂತಸ. ಅಂತೆಯೇ ಇಂಥ ಲೇಖಕರನ್ನು ಪ್ರೋತ್ಸಾಹಿಸುತ್ತಾ ತನ್ನ ಗುಣಮಟ್ಟವನ್ನು ಉಳಿಸಿಕೊಂಡುದುದು 'ಮುಂಗಾರು'ವಿನ ಉತ್ತಮ ಅಂಶ.

—ದಿನೇಶ್ ಕುಮಾರ್

ಕಟಪಾಡಿ

ಸರಿಯಲ್ಲ

ಪ್ರಿಯರೆ,

12–5–85ರ ವಾರದ ಮುಂಗಾರುವಿನ "ಜ್ಞಾನ ಪರೀಕ್ಷೆ" ವಿಭಾಗದ 6ನೇ ಪ್ರಶ್ನೆ "ಲೋಕದಲ್ಲಿ ಅತೀ ಕಿರಿಯದಾದ ರಾಷ್ಟ್ರ ಯಾವುದು?" ಎಂದಿತ್ತು. ಉತ್ತರದಲ್ಲಿ 'ವತ್ತಿಕ್ಯಾನ್' ಎಂದಿತ್ತು. ಆದರೆ ಈ ಉತ್ತರ ತಪ್ಪು. 'ವತ್ತಿಕ್ಯಾನ್'ನ ವಿಸ್ತೀರ್ಣ:- 1087 ಚ.ಕಿ.ಮೀ. ಅದಕ್ಕಿಂತ 8 ರಾಷ್ಟ್ರಗಳು ಚಿಕ್ಕವು ಇವೆ. ಅವು ಗ್ರೆನಡ (344 ಚ.ಕಿ.ಮೀ), ರಿಬಟ (886 ಚ.ಕಿ.ಮೀ), ಮಾಲ್ಟಾ (316 ಚ.ಕಿ.ಮೀ), ಮೊನಾಕೊ (15 ಚ.ಕಿ.ಮೀ), ಸಿಂಗಪೂರ್ (581 ಚ.ಕಿ.ಮೀ), ಟುವಲು (24 ಚ.ಕಿ.ಮೀ), ಮಾಲ್ಟಾ (316 ಚ.ಕಿ.ಮೀ) ಹಾಂಗ್ ಕಾಂಗ್ (1034 ಚ.ಕಿ.ಮೀ) ಲೋಕದಲ್ಲಿ ಅತಿ ಕಿರಿಯದಾದ ರಾಷ್ಟ್ರ ಯಾವುದು? ಎಂಬುದಕ್ಕೆ ಸರಿಯಾದ ಉತ್ತರ 15 ಚ.ಕಿ.ಮೀ ವಿಸ್ತೀರ್ಣವುಳ್ಳ ಮೊನಕೋ

—ಜಿ. ಮೋಹನ್‌ದಾಸ್ (14)

ಭದ್ರಾವತಿ

ಸೊಗಸಾಗಿತ್ತು

ಪ್ರಿಯರೆ,

12-5-85ರ 'ವಾರದ ಮುಂಗಾರು'ವಿನಲ್ಲಿ ಪ್ರಕಟವಾದ ಅಮೃತ ಸೋಮೇಶ್ವರರ ಸಂದರ್ಶನ ಲೇಖನ ಸೊಗಸಾಗಿ ಮೂಡಿಬಂತು.

ನಾಟಕಕಾರ, ಯಕ್ಷಗಾನ ಪ್ರಸಂಗ ಕರ್ತೃ, ವಿಮರ್ಶಕ, ಕಾದಂಬರಿಕಾರ, ಕವಿ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕೈಯಾಡಿಸಿ ಕೀರ್ತಿಗಳಿಸಿದ ಧೀಮಂತ ಲೇಖಕ ಅಮೃತ ಸೋಮೇಶ್ವರರು ಅಷ್ಟೇ ಉತ್ತಮ ವಾಗ್ಮಿಯೂ ಹೌದು. ಓದುಗರ ಅಥವಾ ಕೇಳುಗರ ಮನಸ್ಸಿನಲ್ಲಿ ಅರ್ಥವತ್ತಾಗಿ ಮರು ಹುಟ್ಟು ಪಡೆಯ ಬಲ್ಲ ಅವರ ಮಾತು ತುಂಬಾ ಅರ್ಥಪೂರ್ಣ.

—ಚಿತ್ರಾ. ಎಸ್. ಅಲ್ವಾರ್

ಮೂಡಿಗೆರೆ

ಚೆನ್ನೆ ಮಣೆ

ಪ್ರಿಯರೆ,

ಮೇ 12ರ ವಾರದ ಮುಂಗಾರು ಪತ್ರಿಕೆಯಲ್ಲಿ ಚೆನ್ನೆ ಮಣೆ ಆಟದ ಕುರಿತು ವಾಮನ ನಂದಾವರರ ಲೇಖನ ಓದಿ ಸಂತೋಷವಾಯ್ತು. ಈ ಚೆನ್ನೆ ಆಟ ತುಳುನಾಡಿಗೇ ಸೀಮಿತವಾಗಿರ ಬೇಕಲ್ಲವೇ? ಬೆಂಗಳೂರಿನ 'ಶಾಶ್ವತಿ' ವಸ್ತು ಸಂಗ್ರಹಾಲಯದ ಕಾರ್ಯ ಕರ್ತೆಯರ ಗಮನಕ್ಕೆ ಈ 'ಚೆನ್ನೆಮಣೆ' ಬಂದಿರಲಾರದೇ? ಚೆನ್ನೆಮಣೆಗಳ ಸಾಲಿನ ಚಿತ್ರವಂತೂ ಲೇಖನಕ್ಕೆ ಮೆರುಗು ನೀಡಿದೆ. ನಮ್ಮ ಒಂದೆರಡು ದಶಕಗಳ ಬಳಿಕ ಈ ತುಳುನಾಡಿನ ಗ್ರಾಮೀಣ ಕ್ರೀಡೆ ಹೇಳ ಹೆಸರಿಲ್ಲದೆ ಮಾಯವಾಗ ಬಹುದೋ ಏನೋ? ಚೆನ್ನೆಮಣೆ ಆಟದ ಸ್ಪರ್ಧೆ, ಟೂರ್ನಮೆಂಟ್ ನಡೆಸುವುದಕ್ಕೆ ಕೂಸೇ ಪಶ್ಚ ಗ್ರಾಮಾಂತರ ಪ್ರದೇಶದ ಯುವತಿ ಮಂಡಲ, ಮಹಿಳಾ ಸಮಾಜಗಳೂ ಮುಂದಾಗುತ್ತಿಲ್ಲವಲ್ಲಾ, ಎಂಬುದೇ ನನಗಾಗುತ್ತಿರುವ ಸೋಜಿಗ ಆಶ್ಚರ್ಯ!

—ಕೆ. ಅನ್ನಪೂರ್ಣ ಯಸ್. ರಾವ್

ಉಡುಪಿ

ಮಾರ್ಗದರ್ಶನ

ಪ್ರಿಯರೆ,

12–5.85ರ ವಾರದ ಮುಂಗಾರುವಿನಲ್ಲಿ ಚಿರಂಜೀವಿ ಉಜಿರೆಯವರಿಂದ ಸಾಹಿತಿ ಹಾಗೂ ಜಾನಪದ ಸಂಶೋಧಕ ಅಮೃತ ಸೋಮೇಶ್ವರರ ಸಂದರ್ಶನದ ಕ್ರಿಯ ವಿಚಾರದಿಂದ ಸಾಹಿತ್ಯ ಪ್ರೇಮಿ ಹಾಗೂ ಯುವ ಸಾಹಿತಿಗಳಿಗೆ ಮಾರ್ಗದರ್ಶನ ನೀಡಿದಂತಾಗಿದೆ.

ಇಂತಹ ಪ್ರತಿಭಾವಂತ ತುಳುನಾಡಿನ ಗಣ್ಯ ಸಾಹಿತಿಯ ಸಂದರ್ಶನದಲ್ಲಿನ ವಿಚಾರಧಾರೆಗೆ ಅಭಿನಂದನೆಯು.

ಮುಂಗಾರು ಪತ್ರಿಕೆಯಿಂದ ಇನ್ನೂ ಹೆಚ್ಚಿನ ರಚನಾತ್ಮಕ ಕೆಲಸಗಳನ್ನು ನಿರೀಕ್ಷಿಸುತ್ತೇನೆ.

—ನಾಗೇಶ್ ಕೋಟಿ

ಮುಂಡಾಜೆ

ಚಿತ್ರ ಚೆನ್ನಾಗಿತ್ತು

ಪ್ರಿಯರೆ,

ದಿನಾಂಕ 12.5.1985ರಂದು ಮುದ್ರಿತಗೊಂಡ (ವಾರದ ಮುಂಗಾರುವಿನಲ್ಲಿ) ವಾರದ ಚಿತ್ರ ಮನವನ್ನು ಮಿಡಿಯುವಂತದಾಗಿತ್ತು. ಆ ಚಿತ್ರಕ್ಕೆ ತಕ್ಕಂತೆ ಕೆಳಗಿನ ನುಡಿ ಹುಲಿಯ ಅಂತರಾಳವನ್ನು ಅರಿಯಲು ಬಹಳ ಸಹಾಯವಾಯಿತು. ಇದನ್ನು ತೆಗೆದ ಟಿ.ಎಸ್.ಸತ್ಯನ್ ಅವರಿಗೆ ನನ್ನ ಆತ್ಮೀಯ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಇನ್ನೂ ಇಂತಹ ಚಿತ್ರಗಳನ್ನು ತೆಗೆಯಲಿ ಎಂದು ಅವರ ಕ್ಯಾಮರವನ್ನು ಕೇಳಿಕೊಳ್ಳುತ್ತೇನೆ–

—ಸಿ. ಬಿ. ದಯಾನಂದ ಸ್ವಾಮಿ

ಶಿವಮೊಗ್ಗ

ಸ್ವಂತಿಕೆಯ ಸೊಗಸಿದೆ

ಪ್ರಿಯರೆ,

12-5-1985ರ 'ಮುಂಗಾರು'ವಿನಲ್ಲಿ ಪ್ರಕಟವಾದ 'ಸಹೃದಯ ಸಾಹಿತಿ ಅಮೃತ ಸೋಮೇಶ್ವರ' ಲೇಖನ ಓದಿದೆ. ಸಂದರ್ಶಕರಾದ ಚಿರಂಜೀವಿ ಮತ್ತು ನೀವು ಒಳ್ಳೆಯ ಕೆಲಸವೊಂದನ್ನು ಮಾಡಿದ್ದೀರಿ. ಅಮೃತರನ್ನು ಕರಾವಳಿಯ ಜನ ಗಂಭೀರವಾಗಿ ಸ್ವೀಕರಿಸುವ ಕಾಲ ಬಂದಿದೆ ಎಂಬ ಸಂತೋಷವಿದೆ ನನಗೆ.

ಅನೇಕ ವಾಗ್ವಾದಗಳ ನಡುವೆ ಸದ್ದಿಲ್ಲದ ಕೆಲಸ ಮಾಡಿದವರು ಅಮೃತರು. ಸೂಕ್ಷ್ಮವಾದ ದೃಷ್ಟಿಗೆ ಮಾತ್ರ ಗೋಚರವಾಗುವಂಥ ಪ್ರಗತಿ ಪರ ವ್ಯಕ್ತಿತ್ವ ಅವರದು. ನಿರ್ದಿಷ್ಟವಾಗಿ ಅವರನ್ನು ಯಾವ ಪಂಥಕ್ಕಾದರೂ ಸೇರಿಸಬೇಕಾದ ಅವಶ್ಯಕತೆಯೇನೂ ಇಲ್ಲ. ಏಕೆಂದರೆ ಅವರ ಕಾವ್ಯದಲ್ಲಿ ಅವರದ್ದೇ ಆದ ಧ್ವನಿಯೊಂದರ ಸೊಗಸಿದೆ. ಆ ಧ್ವನಿಗೆ ಸ್ವಂತಿಕೆಯ ಸೊಗಡಿದೆ. ಜೀವನದ ಸಹಜ ಲಯಗಳ ಲೇಪವಿದೆ. ತುಳು ಜಾನಪದ ಲೋಕದ ಸಂಭ್ರಮ, ಕೌತುಕಗಳಿವೆ. ಎಲ್ಲಕ್ಕಿಂತ ಮಿಗಿಲಾಗಿ ಸರಳತೆ, ಅಕೃತ್ರಿಮತೆ, ಮುಗ್ಧತೆಯ ಗ್ರಾಮೀಣ ಜೀವನದ ರಮಣೀಯತೆಯಿದೆ.

ಕನ್ನಡ ಕಾವ್ಯ ಕಳೆದುಕೊಳ್ಳುತ್ತಿರುವ ಕೆಲವು ಅನುಭವಗಳು ಅಮೃತರಲ್ಲಿವೆ ಎಂಬ ಕಾರಣಕ್ಕೆ, ತುಳು ಸಾಹಿತ್ಯಕ್ಕೆ ಅತ್ಯುತ್ತಮವಾದದ್ದನ್ನು ಅಮೃತರು ಕೊಡಬಲ್ಲರು ಎಂಬ ಕಾರಣಕ್ಕೆ–ನನಗೆ ಸಂದರ್ಶನ ಇಷ್ಟವಾಯಿತು.

—ಪುರುಷೋತ್ತಮ ಬಿಳಿಮಲೆ

ಬೆಂಗಳೂರು

–ಮಕ್ಕಳ ಶಾಲೆ–

ಗೂಂಡಾಗಿರಿ

ಗೂಂಡಾಗಿರಿ ಯಾವ ಕಾಲದಲ್ಲೂ ಇತ್ತು. ಜನರು ಹೊಡೆತ ತಿಂದು ನೋವು ಪಡಲು ಹೆದರುತ್ತಾರೆ. ಸಾಯಲು ಯಾರು ತಾನೆ ಇಷ್ಟ ಪಡುತ್ತಾರೆ. ಸಾರ್ವಜನಿಕ ಸ್ಥಳದಲ್ಲಿ ಮರ್ಯಾದೆ ಕಳೆದುಕೊಳ್ಳಲು ಯಾರು ಇಷ್ಟ ಪಡುತ್ತಾರೆ. ಅದಕ್ಕಾಗಿಯೇ ಗೂಂಡಾಗಿರಿಯ ಮೂಲಕ ಅನಿಷ್ಟ ಇಷ್ಟಗಳನ್ನು ಸಾಧಿಸಿಕೊಳ್ಳಬಹುದು.

ಗೂಂಡಾ ಅನ್ನಿಸುವ ವ್ಯಕ್ತಿ ಸಮಾಜದಿಂದ ಪ್ರೀತಿಯನ್ನು ಪಡೆಯಲಾಗದವನಾಗಿದ್ದು ದ್ವೇಷ ಮತ್ತು ಹೊಡೆತ, ಅಪಮಾನವನ್ನು ಅನುಭವಿಸಿರುತ್ತಾನೆ. ತನ್ನ ಬದುಕಿನ ಬಗ್ಗೆ ಆಶೆ ಕಳೆದುಕೊಂಡ ಅವನು ಇತರರ ಬದುಕುಗಳ ಮೇಲೆ ದಾಳಿ ನಡೆಸುತ್ತಾನೆ.

ರಾಜಕಾರಣಿಗಳು ಗೂಂಡಾಗಳನ್ನು ಸಾಕುತ್ತಾರೆ. ಅವರಿಗೆ ಜನ ಬೆಂಬಲವೂ ಪ್ರಭಾವವೂ, ಅಧಿಕಾರವೂ ಇರುತ್ತದೆ. ತಮಗೆ ಆಗದವರ ಕೈಕಾಲು ಮುರಿಯಲಾಗಲಿ ಕೊಲ್ಲಲಾಗಲಿ ಗೂಂಡಾಗಳನ್ನು ಬಳಸಿಕೊಳ್ಳುತ್ತಾರೆ. ತಮ್ಮ ಗೂಂಡಾಗಳು ಸಿಕ್ಕಿ ಬಿದ್ದರೆ ಫೋನ್ ಮಾಡಿ ಪೋಲೀಸರಿಂದ ಬಿಡಿಸುತ್ತಾರೆ. ತಾವೇ ವಕೀಲರನ್ನು ಒದಗಿಸಿ ಕೊಡುತ್ತಾರೆ. ಚುನಾವಣೆಯ ಸಮಯ ತಮ್ಮ ಎದುರು ಪಕ್ಷದ ಕಾರ್ಯಕರ್ತರನ್ನು ಸದೆ ಬಡಿಯಲು. ಪ್ರಚಾರದ ಕಾವನ್ನು ಹೆಚ್ಚಿಸಲು ಇವರು ತೀರಾ ಅಗತ್ಯ.

ನಮ್ಮ ಸಮಾಜದಲ್ಲಿ ಜಾತಿ ಘರ್ಷಣೆ ಸಾಮಾನ್ಯ. ಈ ಸಮಯದಲ್ಲಿ ಮಂಚೂಣಿಯಲ್ಲಿ ಹೊಡೆದಾಡುವವರು ಗೂಂಡಾಗಳೆ. ತನ್ನ ಜಾತಿಯ ಹುಡುಗಿಯರ ಮೇಲೆ ಬೇರೆ ಜಾತಿಯ ಹುಡುಗರು ಕಣ್ಣು ಹಾಕದಂತೆ ರಕ್ಷಿಸಿ ಜಾತಿಯ ರಕ್ತದ ಗಡಿಗಳನ್ನು ಕಾಯುತ್ತಾರೆ. ಏಕೆಂದರೆ ಜಾತಿ ಎಂದರೆ ರಕ್ತ ಸಂಬಂಧದ ಸಂಬಂಧಿಗಳ ದ್ವೀಪ. ಕೆಲವು ಮುಖ್ಯ ಕುಟುಂಬಗಳು ಆ ಜಾತಿಯನ್ನು ಆಳುತ್ತವೆ. ಆ ಕುಟುಂಬಗಳು ಗೂಂಡಾಗಳನ್ನು ಬೆಳೆಸುತ್ತಾರೆ. ರಾಜಕೀಯದಲ್ಲಿ ಜಾತಿ ಪ್ರಾಬಲ್ಯವನ್ನು ಉಳಿಸಲು ಇವರು ಸಹಾಯ ಮಾಡುತ್ತಾರೆ.

ಕಾಲೇಜು ಚುನಾವಣೆ ಎಂದರೆ ಗೂಂಡಾಗಳು ಬೇಕು. ನಾಮಪತ್ರ ಸಲ್ಲಿಸಿದ ಅಭ್ಯರ್ಥಿಯ ನಾಮಪತ್ರವನ್ನು ಹಿಂತೆಗೆಸುತ್ತಾರೆ. ಅಭ್ಯರ್ಥಿಗಳನ್ನು ಅಪಹರಿಸಲು ಸಹಾಯ ಮಾಡುತ್ತಾರೆ. ವ್ಯಾಪಾರವನ್ನು ರಕ್ಷಿಸಲೂ ಗೂಂಡಾಗಳೂ ಬೇಕಾಗುತ್ತಾರೆ. 50 ಜನ ಗೂಂಡಾಗಳು 50, 000 ಜನರ ಇಡೀ ಊರನ್ನು ನಡುಗಿಸುತ್ತಾರೆ. ಈಗಂತು ನಗರದಲ್ಲಿ ಬಾಡಿಗೆಗೆ ಗೂಂಡಾಗಳು ಸಿಗುತ್ತಾರೆ. ಹಣಕ್ಕಾಗಿ ಯಾರ ಕೊಲೆಯನ್ನು ಮಾಡಬಲ್ಲವರಾಗಿದ್ದಾರೆ.

ಮನುಷ್ಯ ಮರ್ಯಾದೆಗೆ ಬಹಳ ಹೆದರುತ್ತಾನೆ. ಸಾಮೂಹಿಕವಾಗಿ ಮಾನ ಕಳೆದುಕೊಳ್ಳುವುದನ್ನು ಯಾರೂ ಇಷ್ಟ ಪಡುವುದಿಲ್ಲ. ಗೂಂಡಾಗಿರಿಯ ಒಳಗುಟ್ಟು ಇದೇ ಆಗಿದೆ.

ಈ ಗೂಂಡಾಗಿರಿಯನ್ನು ಸಂಪೂರ್ಣವಾಗಿ ನಿಲ್ಲಿಸಬಹುದು. ಇಡೀ ಜನ ಸಮೂಹವೇ ಒಂದಾಗಿ ಗೂಂಡಾಗಿರಿಯನ್ನು ವಿರೋಧಿಸಬೇಕು. ಅದರ ವಿರುದ್ಧ ಜನಾಭಿಪ್ರಾಯ ನಿರ್ಮಿಸಬೇಕು.

ಸಮಾಜದ ದೀನ ದಲಿತರ, ಕಾರ್ಮಿಕರ ಮೇಲೆ ಗೂಂಡಾಗಿರಿ ನಡೆಸಿ ಅವರಿಂದ ಹೆಚ್ಚು ದುಡಿಮೆಯನ್ನು ಪಡೆಯಬಹುದಾಗಿದೆ. ಅವರು ಮುನ್ನುಗ್ಗದಂತೆ ತಡೆ ಹಿಡಿಯಬಹುದಾಗಿದೆ.

ವೃತ್ತ ಪತ್ರಿಕೆಗಳು ಗೂಂಡಾಗಿರಿಯನ್ನು ಪ್ರಬಲವಾಗಿ ತಡೆ ಹಿಡಿಯಬಲ್ಲವು. ಒಟ್ಟಿನಲ್ಲಿ ಗೂಂಡಾಗಿರಿಯ ನಿರ್ಮೂಲನಕ್ಕಾಗಿ ಜನ ಸಿಡಿದು ನಿಲ್ಲಬೇಕು. ಈ ಜನರನ್ನು ಒಂದು ಸೇರಿಸಲು ಒಂದು ನಾಯಕತ್ವ ಬೇಕು.

ಅಂತಹ ನಾಯಕ ಯಾರು ?

—ಭವಾನಿಶಂಕರ್ ಶಿರ್ವ

ಮನಸೆಳೆವ 'ತುಂಟನ ಪದಗಳು'

'ತುಂಟನ ಪದಗಳು'
—ಲೇ. ವಿ. ಜಿ. ಭಟ್ಟ
—ಶ್ರೀ ರುಕ್ಮಿಣೀ ಪ್ರಕಾಶನ ಮುಂಬಯಿ
ಬೆಲೆ ರೂ.ಎಂಟು. ಪುಟಗಳು 46 + 8

ಈಗಾಗಲೇ ಕನ್ನಡ ಸಾರಸ್ವತ ಲೋಕದಲ್ಲಿ ತನ್ನತನದ ಮುದ್ರೆ ಒತ್ತಿರುವ, ಸದ್ಯ ದೂರದ ಮುಂಬಯಿಯಲ್ಲಿ ವಾಸ್ತವ್ಯ ಹೂಡಿರುವ ವಿ. ಜಿ. ಭಟ್ಟರ 'ತುಂಟನ ಪದಗಳು' ಎಂಬ ನಾಮಧೇಯದ ಕವನ ಸಂಕಲನದ ತುಂಟಾಟ ಸಾಹಿತ್ಯ ಪ್ರಿಯರ ಮೆಚ್ಚುಗೆ ಗಳಿಸುವುದರಲ್ಲಿ ಸಂಶಯವಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು.

ಹಳ್ಳಿಯ ಸಾಲೆ ಚೆಂದ
ಹತ್ರಕೆ ಮಾಸ್ತರ ಬಂದ
ಹುಡುಗರಿಲ್ಲ
ಕೇರಿಯೆಲ್ಲ
ಸುತ್ತಿ ಕರೆದು ತಂದ.

ಈ ಹನಿಕವನ ಓದುವಾಗ ನಮಗೆ ನಗೆ ತರಿಸುತ್ತದೆ. ನಗೆಯ ಹಿಂದೆ ನಮ್ಮ ಜನರ ಬದುಕಿನ ದುರಂತವನ್ನೂ ತೋರಿಸುತ್ತದೆ. 'ವಿದ್ಯೆ ಇಲ್ಲದವನ ಬಾಳು ಹಾಳೂರ ಹದ್ದಿ ನಂತಕ್ಕು ಸರ್ವಜ್ಞ' ಎಂಬ ಸರ್ವಜ್ಞನ

ಪುಸ್ತಕ ವಿಮರ್ಶೆ

ಮಾತುಗಳು ಇಲ್ಲಿ ನೆನಪಾಗುತ್ತವೆ. ನಮ್ಮ ಹಳ್ಳಿಗಳಲ್ಲಿ ವಿದ್ಯೆ ಕಲಿಯಲು ಹಿಂದೇಟು ಹಾಕುವ ಹುಡುಗರು, ಮಾಸ್ತರರು ಪಡುವ ಪಾಡು ಇವನ್ನೆಲ್ಲಾ ಹಾಸ್ಯ ಪೂರಿತವಾಗಿ ಕವಿಗಳು ಹನ್ನೊಂದೇ ಶಬ್ದಗಳಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ನಾಡಿನಲೆಲ್ಲಾ
ಫಿರಂಗಿ ಲೂಟ
ನಾಡವರಿಗೆ
ಬಿರಿ ಲಂಗೋಟ

ಎನ್ನುತ್ತಾ ಕವಿ, ಈ ವಿಜ್ಞಾನ ಯುಗದಲ್ಲಿ ನಡೆಯುತ್ತಿರುವ ಶಸ್ತ್ರಾಸ್ತ್ರ ಸ್ಫೋಟ ಯಾವ ಸ್ಥಿತಿಗೆ ತಲುಪಿದೆ ಎಂದು ಸೂಚ್ಯವಾಗಿ ಹೇಳುತ್ತಾ,

ಗುಡಿಸಲಿನಲಿ ಅಡ
ಗಿದರೋ ಅಂಜಿ
ಹಸಿದೊಡಲಿಗೆ ಸಿಗ
ದಿದೆ ಗಂಜಿ

ಎನ್ನುತ್ತಾ ಬಡವರ ಬವಣೆಯನ್ನು ಅರ್ಥ ಗರ್ಭಿತವಾಗಿ ಚಿತ್ರಿಸಿದ್ದಾರೆ.

ಇಲ್ಲಿರುವ 74 ಹನಿ ಗವನಗಳೂ ಸುಲಭ ಭಾಷೆಯಲ್ಲಿ, ಹಾಸ್ಯರಸ ಬೆರೆತು ರಚಿಸಲ್ಪಟ್ಟಿವೆ.

ಚಿಕ್ಕ ಮಕ್ಕಳಿಗಾಗಿ ರಚಿತವಾದ ಕಾವ್ಯವು "ಕಾಗೆ ಕಾಕಾ ಎಂದು ಗುಬ್ಬಿ ಚಿಂವ್ ಚಿಂವ್ ಎಂದು" ಎಂಬ ವಾಸ್ತವಿಕತೆಯು ಮಾತ್ರ ಅವರಿಗೆ ಅರ್ಥವಾಗಬಲ್ಲದೆಂಬ ಗ್ರಹಿಕೆಯಿಂದ ರಚಿತವಾಗಿದ್ದರೆ ಸುಖವಿಲ್ಲ ಎಂದು ಹಿರಿಯ ಕವಿಗಳಾದ ವಿ. ಕೃ. ಗೋಕಾಕರ ಮಾತು ಭಟ್ಟರ ಈ ಕವನ ಸಂಕಲನಕ್ಕೆ ಸರಿಯಾಗಿ ಅನ್ವಯಿಸುತ್ತದೆ.

ತುಂಟನ ಪದಗಳಲ್ಲಿ ಕೃತಿಮತೆ ಇಲ್ಲ. ಇಲ್ಲಿಯ ಕಲ್ಪನಾ ವೈಚಿತ್ರ್ಯ, ವಿನೋದ, ಸಭ್ಯತೆಗಳು ಕಿರಿಯರನ್ನು ಮಾತ್ರವಲ್ಲ ಹಿರಿಯರನ್ನು ಆಕರ್ಷಿಸುವಲ್ಲಿ ಹಿಂದೆ ಬೀಳದು.

—ಸುಧಾಕರ ಬನ್ನಂಜೆ

ಪುಟಾಣಿ ಚಿತ್ರ

ಜಾನ್‌ಸನ್ ಮೈಲಾರ್ ಮಂಗಳೂರು

ಅಶ್ವಿನಿ ಬೋರಿವಲಿ ಮುಂಬಯಿ

ಸೌಮ್ಯ ಸೇಜಾವರ ಕಕ್ಕಾಡಿ

ನೆನಪಿನಂತರಾಳದಿಂದ ಜೋಸೈಮನ್‌ರ ವಿಚಾರಧಾರೆ

'ತೇಜೋವಧೆ ಮಾಡುವ ಗಾಸಿಪ್ ಬೇಡ'



"ಹೌದು" ನಾನೂ ಎಲ್ಲರಂತೆ ನಿರ್ದೇಶಕನಾಗುವ ಮುಂಚೆ ನಟನಾಗುವ ಬಯಕೆ ಹೊತ್ತಿದ್ದುಂಟು. ಆದರೆ... ಕಾಲ ನನ್ನನ್ನು ಅಭಿನಯದತ್ತ ತೀವ್ರ ತೂರಿಸದಿದ್ದಾಗ ನಿರಾಸೆಗೊಂಡದ್ದೂ ಸತ್ಯ. ಮೇಕಪ್ ಬಾಯ್ ಆಗಿ ನಂತರ ಕ್ಲಾಪಿಂಗ್ ಬಾಯ್ ಆಗಿ ಮುಂದುವರೆದ ನಾನು, ಇಡೀ ಚಿತ್ರ ತಂಡದ ನಿಯಂತ್ರಕನಂತಿರುವ ಸೂತ್ರಧಾರ ಅರ್ಥಾತ್ ನಿರ್ದೇಶಕನಾಗಲು ಆಸೆಪಟ್ಟಿದ್ದೆ; ಅಷ್ಟೆ. ಆದರೆ ಖಂಡಿತಾ ಆಗುತ್ತೇನೆಂಬ ನಂಬಿಕೆಯಿರಲಿಲ್ಲ. – ಜೋ ನೆನಪನ್ನು ಹರಡಿಕೊಳ್ಳಲು ಆರಂಭಿಸುತ್ತಾರೆ.

"ಹೀಗೆ ಕಾರ್ನಾಡರ ವಂಶವೃಕ್ಷದಂತೆ ಚಿತ್ರಗಳ ಜೊತೆ ಬಹಳ ಅನಿರೀಕ್ಷಿತವಾಗಿ ಅಂತೆಯೇ ನನ್ನ ಪ್ರಥಮ ನಿರ್ದೇಶನದಲ್ಲಿ "ಒಂದು ಪ್ರೇಮದ ಕಥೆ" ಸಿದ್ಧವಾಯಿತು. ಚಿತ್ರ ತನ್ನ ಗುಣಮಟ್ಟದಲ್ಲಿ, ಪಗಾಲ್ಯದಲ್ಲಿ ಯಶಸ್ವಿಯಾದರೂ ಲಾಭದಾಯಕ ಎನಿಸಲಿಲ್ಲ. 12 ದಿನಗಳಲ್ಲಿ ತಯಾರಾದ ಈ ಚಿತ್ರ ವಾಸ್ತವವಾಗಿ ಕನ್ನಡದ ಪ್ರಪ್ರಥಮ ಸಿನಿಮಾಸ್ಕೋಪ್ ಚಿತ್ರ. ಬಿಡುಗಡೆಯಲ್ಲಾದ 'ಏಳು ದಿನಗಳ ಅಂತರದಿಂದಾಗಿ ಅಂಕಲಗಿ ಮಿತ್ರರ ಚಿತ್ರಕ್ಕೆ ಈ ಹೆಗ್ಗಳಿಕೆ ಸಿಕ್ಕಿತು." ತಮ್ಮ ನಿಲುವು ನಿರ್ದೇಶನದ ಬಗೆಗೆ ಜೋ ಮನಸ್ಸನ್ನು ಬಿಚ್ಚುತ್ತಾರೆ.

"ದಾಸ್, ನನ್ನ ಚಿತ್ರ ನಿರ್ದೇಶನದ ಜೀವನದಲ್ಲಿ ಪ್ರಮುಖರು. ನಾನೇನೋ ನಿರ್ದೇಶಕ ಎನಿಸಿದೆ. ಆದರೆ ನಿರ್ದೇಶಕನೆಂದು ಕರೆದುಕೊಳ್ಳಲು ಮನಸ್ಸೊಪ್ಪಲಿಲ್ಲ. ಸ್ವತಂತ್ರ ನಿರ್ದೇಶನಕ್ಕೆ ಆತುರ ಬೇಡವೆಂದು ಮತ್ತೆ ಸಹನಿರ್ದೇಶಕನಾದೆ. ಬಹುಶಃ ಅಗ 77ನೇ ಇಸವಿ. ವಿಜಯ್ – ವಿಕ್ರಮ್ ಚಿತ್ರದ ನಿರ್ದೇಶನದ ಹೊಣೆ ಹೊತ್ತ ದಾಸ್ ಅನಿರೀಕ್ಷಿತವಾಗಿ, ಚಿತ್ರದ ಆರಂಭ ದಿನವೇ ತೀವ್ರ ಅನಾರೋಗ್ಯಕ್ಕೆ ತುತ್ತಾದಾಗ, ಮತ್ತೊಬ್ಬ ನಿರ್ದೇಶಕನನ್ನು ಕರೆತರಲು ನಿರ್ಮಾಪಕರು ಯೋಚಿಸಿದರು." ತಾವು ಸ್ವಷ್ಟ ಬಿಗಿ ನಿಲುವಿನಿಂದ ನಿರ್ದೇಶಕನಾಗಲು ಅನುಭವ ಗಳಿಸಿದ ಬಗೆಗೆ ಅವರು ಹೇಳಲು ಆರಂಭಿಸುತ್ತಾರೆ.

"ನಾನೆಂದೆ, ಮತ್ತೊಬ್ಬ ನಿರ್ದೇಶಕನನ್ನೇ ತರುವುದಾದರೆ ಅಲ್ಲಿ ಸಹ ನಿರ್ದೇಶಕ ಏಕಿರಬೇಕು? ನಾನು ಖಂಡಿತಾ ದಾಸ್‌ರನ್ನುಳಿದಂತೆ ಬೇರೊಬ್ಬರ ಬಳಿ ಸಹ ನಿರ್ದೇಶಕನಾಗಲಾರೆ. ಶ್ರದ್ಧೆ ವಿಶ್ವಾಸದಿಂದ ಆಸಕ್ತಿಯಿಂದ ಬೇಕಾದರೆ ನನ್ನ ಗುರುಗಳು ಬರುವ ವರೆಗೂ ನಾನೇ ಕೆಲಸ ಮುಂದುವರೆಸುತ್ತೇನೆ. ಆ ಮೇಲೆ ಅವರು ಬಂದು ಮುಂದುವರೆಸುತ್ತಾರೆ. ಆದರೆ ನನ್ನ ಕೆಲಸದ ಬಗೆಗೆ ಅವರಿಗಿನ್ನೂ ನಂಬಿಕೆ ಇರಲಿಲ್ಲ. ಹಾಗೆಂದು ನಾನೂ ನನ್ನ ತೀರ್ಮಾನ ಬದಲಿಸಲಿಲ್ಲ. ಕಡೆಗೂ ದಾಸ್ – ನಿರ್ಮಾಪಕರ ಮಾತುಕಥೆ ನಡೆದು, ದಾಸ್‌ರ ಮಾತಿನಂತೆ ನಾನೇ ಚಿತ್ರ ಮುಂದುವರೆಸಲು ಅನುಕೂಲವಾಯಿತು. ಯಾರ ನಿರೀಕ್ಷೆಗೂ ಬಾರದಂತೆ ಸೊಗಸಾಗಿ ಚಿತ್ರಣ ಮುಂದುವರೆಸಿದೆ. ಆರಂಭದಲ್ಲಿದ್ದ ಉದ್ವಿಗ್ನ ಮನೋಭಾವ, ಕ್ರಮೇಣ ದೂರವಾಡಿ ಕೊಂಡ ವಿಷ್ಣುವರ್ಧನ್ ನಂತರ ಸಂಪೂರ್ಣ ಸಹಕಾರ ಉತ್ತೇಜನ ತೋರಿದರು; ಅವರೆಲ್ಲರ ಸಹಕಾರ ಹಾಗೂ ಈ ಚಿತ್ರ ನನ್ನ ಜೀವನದ ಮೈಲಿಗಲ್ಲು" ಜೋ ತಮ್ಮ ಅಂದಿನ ಸಂತೃಪ್ತಿಯ ದಿನಗಳನ್ನು ಮರುಕಳಿಸಿ ಕೊಳ್ಳುತ್ತಾರೆ. ಜೋಸೈಮನ್ ಮುಂದುವರೆದು ಹೇಳುತ್ತಾರೆ.

"ವಿಷ್ಣುಗೆ ನನ್ನ ಬಗೆಗೆ ಎಷ್ಟು ವಿಶ್ವಾಸ ಮೂಡಿತ್ತೆಂದರೆ, ಮುಂದು ತಾನು ಅಭಿನಯಿಸಲಿದ್ದ "ನನ್ನ ರೋಷ......" ಚಿತ್ರಕ್ಕೆ ನನ್ನನ್ನು ನಿರ್ದೇಶಕನಾಗಲು ಶಿಫಾರಸು ಮಾಡಿದರು. ನನ್ನ ಅಭಿಮತದಂತೆ ನಾನವರ ವಿಶ್ವಾಸಕ್ಕೆ ಧಕ್ಕೆ ಬಾರದಂತೆ ಚಿತ್ರವನ್ನು ಸಂಪೂರ್ಣವಾಗಿ ಆಕರ್ಷಕವಾಗಿ ಚಿತ್ರಿಸಿದೆ... ಆದರೆ ಅದು ತುರ್ತು ಪರಿಸ್ಥಿತಿಯ ಕಾಲ. ಹಿಂಸೆ, ಕ್ರೌರ್ಯದ ದೃಶ್ಯಗಳ ಮೇಲೆ ಮೂರು ಬಾರಿ ಸೆನ್ಸಾರ್ ತನ್ನ ಕತ್ತರಿಯಾಡಿಸಿ ಬಿಡುಗಡೆಗೆ ಅನುಮತಿ ನೀಡಿತಾದ ಕಾರಣ ಚಿತ್ರ ಜನರಿಗೆ ಅಷ್ಟಾಗಿ ನಿರೀಕ್ಷಿತ ಮನೋರಂಜನೆ ನೀಡಲಿಲ್ಲ. ಬಿಡುಗಡೆಗೆ, ಸೆನ್ಸಾರ್‌ಗೆ ಮುನ್ನ ಚಿತ್ರ ನೋಡಿದ್ದ ಚಿತ್ರೋದ್ಯಮಿಯ ಜನ ಬೆನ್ನು ತಟ್ಟಿದ್ದು ಮಾತ್ರ ಇಂದಿಗೂ ಹಸಿರಾದ ನೆನಪು" ಅವರ ಮಾತಿನ ಹಿನ್ನೆಲೆಯಲ್ಲಿ 'ಅಂತ'ಕ್ಕಿಂತಾ ಉತ್ತಮವಾಗಿತ್ತು ಎಂಬ ಭಾವನೆ ಇದ್ದಿರಲೂಬಹುದು.

ಅವರೇ ಹೇಳುವಂತೆ–

"ನಂತರದ ಸಿಂಹಜೋಡಿಯ ಯಶಸ್ಸು, ಸಾಹಸ ಸಿಂಹನ ಉಗಮಕ್ಕೆ ದಾರಿ ಮಾಡಿಕೊಟ್ಟಿತು. 'ಸಾಹಸ ಸಿಂಹ' ಚಿತ್ರದ ಯಶಸ್ಸಿನ ಬಗೆಗೆ ಹೇಳಬೇಕಿಲ್ಲ. ಸರ್ವ ವೇದ್ಯವಾಗಿದೆ. ಜನ ವಿಷ್ಣು–ಜೋ– ವಿಜಯ್–ನಾಗಭೂಷಣರ ಸಂಯೋಜನೆಯ ಚಿತ್ರಗಳಿಗಾಗಿ ಆಗಿನಿಂದ ನಿರೀಕ್ಷಿಸಲಾರಂಭಿಸಿದರು. ನಂತರದ ಚಿತ್ರಗಳ ಬಗೆಗೆ, ಯಶಸ್ಸು (?) ಗಳ ಬಗೆಗೆ ನಿಮಗೇ ಗೊತ್ತಿದೆ".

"ನಾನು ಇದುವರೆಗೂ ಒಂದೂ ರಿಮೇಕ್ ಚಿತ್ರ ಮಾಡಿಲ್ಲ. ಈಗೀಗ್ಗೆ ಹೊಸಬರಿಗೆ ಅವಕಾಶ ನೀಡುತ್ತಿದ್ದೇನೆ. ನಟನೆ–ಹಿನ್ನೆಲೆ ಗಾಯನಗಳಲ್ಲಿ ಕೂಡಾ. 'ಮಹಾ ಪ್ರಚಂಡರು' ಚಿತ್ರದಲ್ಲಿ ಅತೀವ ಸೆಕ್ಸ್ ಪ್ರದರ್ಶನದ ಬಗೆಗೆ ಜನರ ವಿರೋಧ ಬಂದಾಗಿನಿಂದ ನನ್ನ ನಂತರದ ಚಿತ್ರಗಳಲ್ಲಿ ಆದಷ್ಟೂ ಆ ನಮೂನೆಯ ದೃಶ್ಯ ಸನ್ನಿವೇಶಗಳನ್ನು ದೂರ ಮಾಡುತ್ತಿದ್ದೇನೆ. ಹೊಸಬರಿಗೆ ಆದಷ್ಟೂ ಅವಕಾಶ ಮಾಡಿಕೊಡುತ್ತಿದ್ದೇನೆ. 'ನ್ಯಾಯ ಗೆದ್ದಿತು' ಚಿತ್ರದಲ್ಲಿ ಪ್ರಭಾಕರ್‌ಗೆ ನಾಯಕನ ಸ್ಥಾನ ನೀಡಿದೆ. ಹೀಗೇ ನನ್ನ ಮಟ್ಟಿಗೆ ತೃಪ್ತಿ ತಂದ ಹಲವಾರು ಸಾಧನೆಗಳ ಪಟ್ಟಿ ಮಾಡಬಲ್ಲೆ. ಆದರೆ..." ಎಂದು ಧ್ವನಿ ತಗ್ಗಿಸಿದ ಜೋ ರವರ ಮಾತಿನಲ್ಲಿ ವಿಷಾದವಿದೆ. ಅದಕ್ಕೆ ಕಾರಣವೂ ಇಲ್ಲದಿಲ್ಲ.

"ನಿಜ, ಗಾಸಿಪ್ ಇರಬೇಕು. ಆದರೆ ವೈಯುಕ್ತಿಕ ತೃಷೆಗಾಗಿ, ಮನೋಲ್ಲಾಸಕ್ಕಾಗಿ ಮತ್ತೊಬ್ಬರ ತೇಜೋವಧೆ ಮಾಡಬೇಕೇ? ನಾನು ನಮ್ಮ ನಾಡು, ನಮ್ಮ ಜನ ಎಂಬ ಅಭಿಮಾನದಿಂದ ಅಮದು ತಾರೆಯರಿಗೆ ಮೊರೆಹೋಗದೆ ಕನ್ನಡದ ಯುವ ಪ್ರತಿಭೆಗೆ ಪ್ರೋತ್ಸಾಹ ನೀಡಿದ್ದು ತಪ್ಪೇ? ಸ್ನೇಹ– ವಿಶ್ವಾಸಗಳಿಗೆ, ಸಹೃದಯತೆಗೆ ಸಮಾನ ಭಾವನೆ ವ್ಯಕ್ತಪಡಿಸಿದರೆ ಅದು ತಪ್ಪೇ? ಕೇವಲ ಒಂದು ಗಾಸಿಪ್ ಯಾ ವದಂತಿಯ ನಂತರ ಸಂಬಂಧಪಟ್ಟ ಮುಗ್ಧ ಜನ ಎದುರಿಸಬೇಕಾದ ಕಹಿ ಘಟನೆಯ ಕಲ್ಪನೆಯೂ ಅವರಿಗೆ ಇರುವುದಿಲ್ಲ. ಮಾಧ್ಯಮವಿದೆಯೆಂದು ಬರೆಯುವರೇ ಹೊರತು ವಿವೇಚನೆಯಿಂದಲ್ಲ."

ಜೋ ರ ಕಹಿ ಮಾತು ಔಷಧಿಯ ಕಹಿ ಯಷ್ಟೇ ಸತ್ಯವಿರಬಹುದು. ನೋವು ನಲಿವುಗಳಲ್ಲಿ ನಮ್ಮದು ಸಮಾನ ಪಾಲು. ವಿದ್ಯಾವಂತೆಯಾದ ಮಡದಿ. ಪರವಾಗಿಲ್ಲ: ಅರ್ಥಮಾಡಿಕೊಂಡು ಸಹಬಾಳ್ವೆ ನಡೆಸುತ್ತಿದ್ದಾಳೆ. ಒಂದು ವೇಳೆ ಪರಿಸ್ಥಿತಿ ಬದಲಿದ್ದರೆ...? ಎಂಬ ಪ್ರಶ್ನೆಯನ್ನು ಜೋ ಮುಂದಿಟ್ಟಾಗ, ಹೌದಲ್ಲವೇ?– ಪರಿಣಾಮ ಎಷ್ಟು ಭೀಕರ ಎನಿಸದಿರಲಿಲ್ಲ.

ನಮ್ಮ ಕನ್ನಡ ಚಿತ್ರರಂಗ, ಮುಗ್ಧ ಕನ್ನಡಿಗರು ನಿಜಕ್ಕೂ ಗಾಸಿಪ್‌ನ ವಿರುದ್ಧ ದಪ್ಪ ಚರ್ಮ ಹೊಂದಿಲ್ಲ. ಖಂಡಿತಾ ಅದನ್ನು ಭರಿಸಲಾರರು. ಹುಸುಮಾತು– ಗಾಳಿ ಸುದ್ದಿಗಳಂಥಾ ಸುದ್ದಿ ಚುಟುಕುಗಳ ಮೊನಚು ಹೃದಯವನ್ನೇ ಕ್ರೂರವಾಗಿ ಭೇದಿಸದಿದ್ದರೂ ಅಣು ಅಣುವಾಗಿ ಕೊಲ್ಲುವುದಂತೂ ಖಂಡಿತಾ. ಈ ರೀತಿಯ ನೈಧಾನಿಕ ಹತ್ಯೆಗಿಂತ ನಮಗೆ ವಿಷ ಕೊಟ್ಟುಬಿಡಿ. ಖಂಡಿತಾ ಬೇಸರ ಪಟ್ಟುಕೊಳ್ಳುವುದಿಲ್ಲ.

—ರಾ. ಸು. ವೆಂಕಟೇಶ

——ದೇ. ರಮೇಶ್

"ಮಮತೆಯ ಮಡಿಲು" ಕನ್ನಡ ಚಿತ್ರದಲ್ಲಿ ಶ್ರೀನಿವಾಸಮೂರ್ತಿ, ಅಂಬರೀಶ್, ಗೀತಾ

ಗ್ರಾಮೀಣ ಯುವಜನತೆಗೆ ರಂಗ ತರಬೇತಿ ಶಿಬಿರ

ವ್ಯಾಯಾಮದಲ್ಲಿ ತೊಡಗಿರುವ ಶಿಬಿರಾರ್ಥಿಗಳು

ಗ್ರಾಮೀಣ ಪ್ರದೇಶದಲ್ಲಿರುವ ಯುವಕ–ಯುವತಿಯರಿಗಾಗಿಯೇ ರಂಗ ತರಬೇತಿ ಶಿಬಿರವೊಂದು ಇತ್ತೀಚೆಗೆ ಜೋಗ್‌ನಲ್ಲಿ ನಡೆಯಿತು. 21 ದಿನಗಳ ಕಾಲ ನಡೆದ ಈ ರಂಗ ತರಬೇತಿ ಶಿಬಿರದಲ್ಲಿ ಶಿವಮೊಗ್ಗ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿರುವ ಯುವಕ ಮಂಡಳಿ–ಯುವತಿ ಮಂಡಳಿಗಳ 20 ಸದಸ್ಯರು ಭಾಗವಹಿಸಿದ್ದರು.

ಈ ರಂಗ ತರಬೇತಿ ಶಿಬಿರದಲ್ಲಿ ಯುವಕ-ಯುವತಿಯರು ಬಹಳ ಆಸಕ್ತಿಯಿಂದ ಭಾಗವಹಿಸಿದ್ದರು. ನೆಹರು ನಾಟಕ ಶಾಲೆಯ ಪದವೀಧರ ಹಾಗೂ "ಹೆಗ್ಗೋಡು ನೀನಾಸಂ"ನ ಕೆ. ವಿ. ಅಕ್ಷರ ಅವರು ಶಿಬಿರವನ್ನು ಯಶಸ್ವಿಯಾಗಿ ನಡೆಸಿದರು.

ತರಬೇತಿಯ ಅವಧಿಯಲ್ಲಿ ಶಿಬಿರಾರ್ಥಿಗಳಿಗೆ ಅಭಿನಯ, ರಂಗತಂತ್ರ, ರಂಗಸಜ್ಜಿಕೆ, ನೃತ್ಯ, ಸಂಗೀತ, ನಾಟಕಕ್ಕೆ ಸಂಬಂಧಪಟ್ಟ ಸಾಮಾನ್ಯ ಜ್ಞಾನ ಇವುಗಳ ಬಗ್ಗೆ ತರಬೇತಿ ನೀಡಲಾಯಿತು.

ಇದೇ ಅವಧಿಯಲ್ಲಿ ಶಿಬಿರಾರ್ಥಿಗಳಿಗೆ ವ್ಯಾಯಾಮ ಹಾಗೂ ಯೋಗಾಸನಗಳಲ್ಲಿಯೂ ತರಬೇತಿ ನೀಡಲಾಯಿತಲ್ಲದೆ, ಧ್ವನಿ, ದೇಹ ಹಾಗೂ ಮನಸ್ಸು ಈ ಮೂರನ್ನೂ ಹೇಗೆ ಅಭಿನಯದಲ್ಲಿ ಅಳವಡಿಸಿಕೊಳ್ಳಬೇಕು, ಎಂಬುದರ ಬಗ್ಗೆಯೂ ತರಬೇತಿ ನೀಡಲಾಯಿತು.

ಪ್ರಜಾಪ್ರಭುತ್ವದ ಮೂಲಭೂತ ಅಗತ್ಯ–ಪರಸ್ಪರ ಅರಿವು. ಈ ಅರಿವಿಗೆ ಮುಖ್ಯ ಸಾಧನ ಭಾಷೆ. ರಂಗಭೂಮಿ ಎನ್ನುವುದು ಅತ್ಯಂತ ಆಕರ್ಷಕವೂ ಪರಿಣಾಮಕಾರಿಯೂ ಆದ ವಿಶಿಷ್ಟ ಭಾಷೆಯಾಗಿರುವುದರಿಂದ ರಂಗಭೂಮಿಯ ಬೆಳವಣಿಗೆ, ಪ್ರಜಾಪ್ರಭುತ್ವದ ಸಿದ್ಧಿಗೆ ಅತ್ಯಂತ ಅಗತ್ಯವಾದ ಒಂದು ಸಾಧನವಾಗಿದೆ.

ಈ ದೃಷ್ಟಿಯಿಂದ ಗ್ರಾಮಾಂತರ ಯುವಕ–ಯುವತಿಯರಿಗೆ ರಂಗಭೂಮಿಯಲ್ಲಿ ತರಬೇತಿ ಒದಗಿಸಿ, ಅವರಿಗೆ ರಂಗಭಾಷೆಯ ಪ್ರಾಮುಖ್ಯ ತಿಳಿಯುವಂತೆ ಮತ್ತು ಈ ಭಾಷೆಯನ್ನು ಯಶಸ್ವಿಯಾಗಿ ಬಳಸಿಕೊಳ್ಳಲು ಸಾಧ್ಯವಾಗುವಂತೆ ಮಾಡುವುದು ಈ ಶಿಬಿರದ ಉದ್ದೇಶ.

ರಂಗ ಸಂಸ್ಕೃತಿ ನಮ್ಮ ನಗರಗಳಲ್ಲಿ ಕೇಂದ್ರೀಕೃತವಾಗದೆ ಅದು ನಿಜವಾದ ಸಂಪರ್ಕ ಸಾಧನವಾಗಿ ಗ್ರಾಮಾಂತರಗಳಲ್ಲೂ ಪ್ರಸರಿಸಬೇಕು ಎನ್ನುವುದು ಕೂಡ ಈ ಶಿಬಿರದ ಆಶಯ.

ಶಿಬಿರದ ಅಂತ್ಯದಲ್ಲಿ ಶಿಬಿರಾರ್ಥಿಗಳ ತಂಡದಿಂದ "ಪ್ರಸನ್ನ" ಅವರ "ಮಹಿಮಾಪುರ" ಎಂಬ ನಾಟಕವನ್ನು ಪ್ರಯೋಗಿಸಲಾಯಿತು. ಜಿಲ್ಲೆಯ ಹೆಗ್ಗೋಡು, ತೀರ್ಥಹಳ್ಳಿ, ಹೊನ್ನಾಳಿ, ಚನ್ನಗಿರಿ ಹಾಗೂ ಶಿವಮೊಗ್ಗದಲ್ಲಿ ಪ್ರದರ್ಶಿಸಲ್ಪಟ್ಟ "ಮಹಿಮಾಪುರ" ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿತಲ್ಲದೆ, ಶಿಬಿರಾರ್ಥಿಗಳೂ ಸಹ ಜನರ ಮೆಚ್ಚುಗೆಗೆ ಪಾತ್ರರಾದರು.

—ಜೆ. ಎ. ಪ್ರಸನ್ನ ಕುಮಾರ್

ಕಾರ್ಗಲ್‌ನಲ್ಲಿ 'ಕಾಕನಕೋಟೆ'

ಲಿಂಗನಮಕ್ಕಿ ಜಲಾಶಯದ ನೀರಿನಿಂದ ಸುತ್ತುವರಿದ ಕರೂರು ಸೀಮೆಯ ದ್ವೀಪಕ್ಕೆ 'ತುಮರಿ'ಯೇ ಕೇಂದ್ರ. ಅತೀ ಹಿಂದುಳಿದ ಪ್ರದೇಶವಾದರೂ 'ಕಾಕನಕೋಟೆ'ಯಲ್ಲಿ ಬರುವ ಕಾಡು ಜನರಂತೆ ನಿರ್ಮಲ ಹೃದಯದವರು. ಸುಸಂಸ್ಕೃತರು ಮತ್ತು ಶ್ರಮಜೀವಿಗಳು. ಈ ದೃಷ್ಟಿಯಲ್ಲಿ 'ಕಾಕನಕೋಟೆ' ಅವರು ಪ್ರಯೋಗಿಸಿದ್ದು ನಿಜಕ್ಕೂ ಅರ್ಥಪೂರ್ಣ.

ಮಾಸ್ತಿಯವರ 'ಕಾಕನಕೋಟೆ' ಅನೇಕ ಹಂತಗಳಲ್ಲಿ ನಮ್ಮನ್ನು ಆಲೋಚನೆಗೆ ಹಚ್ಚುತ್ತದೆ. ನಾಟಕದ ಮೇಲು ನೋಟಕ್ಕೆ ಕಾಣುವ ಹೊಸ ವ್ಯವಸ್ಥೆಗಾಗಿ ಹೋರಾಡುತ್ತಿರುವವರ ಮುಖವಾಣಿಯಾಗಿ ಕಂಡರೂ ಆತ ರಾಜ ಮಹಾರಾಜ (Monarchy) ರನ್ನು ಒಪ್ಪುವ ಛೇಲನಾಗಿಯೇ ಕಾಣುತ್ತಾನೆ. ಹೆಗ್ಗಡೆಯನ್ನು ಒಲ್ಲದ ಕಾಚ ಅರಸರನ್ನು ಒಪ್ಪುವುದು ನಂತರ ಕುರುಬ ಮತ್ತು ಹೆಗ್ಗಡೆಯ ವಿವಾದದಲ್ಲಿ ಸಮಸ್ಯೆ ಬಗೆಹರಿದು ಹೆಗ್ಗಡೆಯ ಮಗನಿಗೆ ಕಾಚಾ ತನ್ನ ಮಗಳನ್ನು ಕೊಟ್ಟು ಮದುವೆ ಮಾಡುವುದು ಇಡೀ ಕುರುಬರ ದುರಂತವಾಗಿ ಕಾಣುತ್ತದೆ; ಇದು ಅವರ ಸಂಸ್ಕೃತಿಯ ದುರಂತವೂ ಹೌದು. ಕರೂರು ಸೀಮೆಗೆ ಹೋಗಲು ಹತ್ತು ಕಿ.ಮೀ. ಹೊಳೆದಾಟಿ ಹೋಗಬೇಕು. ಅಲ್ಲಿಗೊಂದು ಸೇತುವೆ ಹಾಕಿದರೆ ಇಡೀ ನಾಗರಿಕತೆ ಒಳನುಗ್ಗಿ ಹೃದಯವಂತ ಕರೂರು ಜನ ದುರಂತದ ಸೆಳವಿಗೆ ಸಿಕ್ಕಿಹಾಕಿಕೊಂಡು ಬಿಡುತ್ತಾರೆ. ಹಾಗಾಗದಿರಲಿ ಎಂಬುದೇ ನನ್ನ ಆಸೆ.

ಕಾರ್ಗಲ್‌ನಲ್ಲಿ ರಾಷ್ಟ್ರೀಯ ನಾಟಕ ಶಾಲೆಯ ಪದವೀಧರ ಕೆ.ಜಿ. ಕೃಷ್ಣಮೂರ್ತಿ ನಿರ್ದೇಶನದಲ್ಲಿ 'ಕಾಕನಕೋಟೆ' ಒಟ್ಟಾರೆ ಪರಿಣಾಮಕಾರಿಯಾಗಿ ಮೂಡಿಬಂತು. ಅವರು ಬಳಸಿಕೊಂಡ ಹಿನ್ನೆಲೆ, ಆಯ್ದುಕೊಂಡ ರಂಗಸ್ಥಳ ಎಲ್ಲವೂ ಚೆನ್ನಾಗಿತ್ತು. ಇದ್ದ ರಂಗಸ್ಥಳದಲ್ಲಿ ಒಪ್ಪವಾಗಿ ಕಾಪಾಡಿಕೊಂಡ ರಂಗ ಮಟ್ಟ (levels) ಅವರ ಸೂಕ್ಷ್ಮ ಕಲೆಗಾರಿಕೆಯನ್ನು (ಉದಾ: ಹೆಗ್ಗಡೆಯ ಮನೆ, ಕಾಚನ ಮನೆ) ತೋರುತ್ತಿತ್ತು. ಒಬ್ಬ ಪ್ರತಿಭಾವಂತ ನಿರ್ದೇಶಕ ಇಂಥ ವಿಷಯಗಳ ಮೇಲೆ ಕಣ್ಣಿಡಬೇಕು. ಅವರು ಬಳಸಿದ ಸುಲಭ ದರದ ಉಡುಪು ಸಹ ಮೆಚ್ಚತಕ್ಕದ್ದೇ.

ನಾಟಕ ಆರಂಭದಲ್ಲಿ ಡಲ್ಲಾಗಿ ಆರಂಭವಾದರೂ ಬೋರು ಬರಿಸಲಿಲ್ಲ. ಇದಕ್ಕೆ ಕಾರಣ ನಾಟಕಕ್ಕೆ ಇರಬೇಕಾದ continuity ಮಾತುಕತೆ. ಅಭಿನಯದಲ್ಲಿ ಹಾ. ಮ. ಭಟ್ (ಕರಣೀಕ), ಎಚ್.ಟಿ. ಮಹಾಬಲೇಶ್ವರ ಭಟ್(ಗೌಡ), ವಿನಾಯಕ (ಕಾಚ), ಸುಜಾತ (ಮೊಲ್ಲಿ), ಉಷಾರಾಣಿ (ಮೋನಿ) ಮೆಚ್ಚುವಂಥದ್ದು. ಚಕ್ರಪಾಣಿ (ರಣಧೀರ), ಶ್ರೀಧರ್ (ಹೆಗ್ಗಡೆ), ಪರಮೇಶ್ವರ (ಚಿಕ್ಕ ಹೆಗಡೆ) ನಟನೆ ಸಾಲಾಗಲಿಲ್ಲ.

ಸಂಗೀತಕ್ಕೂ, ಅಭಿನಯಕ್ಕೂ ಅನೇಕ ಕಡೆ ಹೊಂದಿಕೆ ಇರಲಿಲ್ಲ. ಕೆಲವು ಹಾಡು ಅನಾವಶ್ಯಕವಾಗಿದ್ದವು. ಕೊನೆಯ ಹಾಡು ಲಯವೇ ಇಲ್ಲದೇ ಇಡೀ ನಾಟಕವನ್ನೇ ತಾಳು ಮಾಡಿ ಹಾಕಿತು. ನಾಟಕದಲ್ಲಿ ಬಳಸಿದ "ನೇಸರ ನೇಸರ" ಹಾಡು ಮತ್ತು ನೃತ್ಯ ಮೂರನೇ ದರ್ಜೆ ತಮಿಳು ಸಿನೆಮಾದ ಡಬ್ಬಿಂಗ್ ಇದ್ದ ಹಾಗೆ ಇತ್ತು. ನಾಟಕಕ್ಕಿದ್ದ ಬೆಳಕು ವಿನ್ಯಾಸ (ಪುಷ್ಪಾ) ತೃಪ್ತಿಕರವಾಗಿತ್ತು.

— ಜಯಪ್ರಕಾಶ ಮಾವಿನಕುಳಿ

"ಕಾಯಿಯಹೊಣೆ" ಕನ್ನಡ ಚಿತ್ರದಲ್ಲಿ ಜಯಂತಿ, ಸುಮಲತಾ

"ನೀ ಬರೆದ ಕಾದಂಬರಿ" ಕನ್ನಡ ಚಿತ್ರದಲ್ಲಿ ವಿಷ್ಣುವರ್ಧನ್, ಫೈಟಂ